ಮಾರ್ಚ್ 2022ರ ಸಂಚಿಕೆ

# ಕನ್ನಡ ಲಿಬರೇಶನ್

ಸಿಪಿಐ (ಎಂಎಲ್) ಲಿಬರೇಶನ್ ಮುಖವಾಣಿ



ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಅವರ ದಾರಿಯಲ್ಲಿ...

# ಅಗಲಿದ ಬಂಡಾಯ-ಪ್ರತಿರೋಧದ ದಿಟ್ಟ ಧ್ವನಿ - ಚಂಪಾ

## ಬಂಡಾಯದ ದನಿಗೆ ಹೊಸ ದಿಕ್ಕು ತೋರಿದ ಸಂಕ್ರಮಣದ ಹರಿಕಾರನ ನಿರ್ಗಮನ



ಭಾರತ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿಯೂ ಸಂಕ್ರಮಣ ಕಾಲಘಟ್ಟದಲ್ಲಿದೆ. ಒಂದು ರೀತಿಯಲ್ಲಿ ಇಡೀ ಸಾಮಾಜಿಕ ಪ್ರಜ್ಞೆಯೇ ಕವಲು ಹಾದಿಯಲ್ಲಿ ನಿಂತಿದೆ. ವಿಶೇಷವಾಗಿ ಕರ್ನಾಟಕ ತನ್ನೆಲ್ಲಾ ಮೌಲ್ಯಗಳನ್ನು ಕಳೆದುಕೊಂಡು ಮತಾಂಧತೆ-ಜಾತೀಯತೆಯ ನೆರಳಲ್ಲಿ ಬೆತ್ತಲಾಗುತ್ತಿದೆ. 1970-80ರ ದಶಕದಲ್ಲಿ ದಲಿತ ಚಳುವಳಿಗಳ ಗಟ್ಟಿ ದನಿಗೆ, ಬಂಡಾಯದ ಘರ್ಜನೆಗೆ ಮಣಿದು ತೆಪ್ಪಗಾಗಿದ್ದ ಜಾತಿ ಪೀಡಿತ ಮನಸುಗಳು, ಮತದ್ವೇಷದ ಕೋಮುವಾದಿ ಮನಸುಗಳು ಈಗ ಹೊಸ ರೂಪಾಂತರದೊಂದಿಗೆ ರಾಜ್ಯದಲ್ಲಿ ನೆಲೆ ಮಾಡುತ್ತಿವೆ. ಮತಾಂಧತೆ, ಕೋಮು ದ್ವೇಷ ಮತ್ತು ಜಾತಿ ತಾರತಮ್ಯಗಳು ಸಮಾಜವನ್ನು ಶತಮಾನಗಳಷ್ಟು ಹಿಂದಕ್ಕೆ ಕರೆದೊಯ್ಯುತ್ತಿದೆ. ಈ ಸಂಕ್ರಮಣದ ಕಾಲಘಟ್ಟದಲ್ಲಿ ನಮ್ಮ ನಡುವೆ ಇದ್ದ ಸಾಹಿತ್ಯಕ-ಸಾಂಸ್ಕೃತಿಕ-ಸಾಮಾಜಿಕ ಸಂಕ್ರಮಣದ ಗಟ್ಟಿ ಧ್ವನಿಯೊಂದು ಮರೆಯಾಗಿಹೋಗಿದೆ.

ಬಂಡಾಯದ ದನಿ ಸಂಕ್ರಮಣದ ಹರಿಕಾರ ಎಂದೇ ಗುರುತಿಸಲ್ಪಟ್ಟಿದ್ದ ಸಾಹಿತಿ, ಕವಿ, ನಾಟಕಕಾರ, ಸಂಘಟನಕಾರ, ಪತ್ರಿಕಾ ಸಂಪಾದಕ ಮತ್ತು ಅಪ್ರತಿಮ ಕನ್ನಡ ಹೋರಾಟಗಾರ, ನಲ್ಮೆಯಿಂದ ಚಂಪಾ ಎಂದು ಕರೆಯಲ್ಪಡುತ್ತಿದ್ದ ಪ್ರೊ ಚಂದ್ರಶೇಖರ ಪಾಟೀಲ್ ತಮ್ಮ 86ನೆಯ ವಯಸಿನಲ್ಲಿ ಅಂತಿಮ ವಿದಾಯ ಹೇಳಿದ್ದಾರೆ. ಚಂಪಾ ಅವರಿಗೆ ಹೇಗೆ ವಿದಾಯ ಹೇಳುವುದು? ಅವರದೇ ಒಂದು ಪದ್ಯವನ್ನು ಉದ್ಧರಿಸುವುದಾದರೆ – ಅರ್ಧಸತ್ಯ ಹುಡುಗಿ ಸಂಕಲನದಿಂದ - "ಸತ್ತವರು ಎಲ್ಲಿ ಹೋಗುತ್ತಾರೆ, ಇದ್ದವರ ನೆನಪಿನ ಗುದ್ದಿನಲ್ಲಿ ಗುದ್ದಲಿಯಾಗುತ್ತಾರೆ" ಹಾಗೆ ಚಂಪಾ ನಮ್ಮ ನಾಡಿನ ಸಾಕ್ಷಿ ಪ್ರಜ್ಞೆಯಾಗಿ, ಬಂಡಾಯದ ದನಿಯ ಗಟ್ಟಿ ಪ್ರಜ್ಞೆಯಾಗಿ ನಮ್ಮೊಳಗೆ "ನಮ್ಮ ಶ್ವಾಸೋಚ್ಛ್ವಾಸದ ಹಳ್ಳ ಕೊಳ್ಳಗಳಲ್ಲಿ ಹಾವಾಗಿ ಹರಿದಾಡುತ್ತಾರೆ. " ಬಹುಶಃ ಚಂಪಾ ಅವರ ವಯೋ ಸಹಜ ಸಾವು ನಮ್ಮನ್ನು ದೃಢಿಗೆಡಿಸದಿರಲು ಈ ಪದ್ಯವೇ ಸ್ಫೂರ್ತಿಯಾಗಬೇಕೇನೋ !!

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಹತ್ತೀಮತ್ತೂರಿನಲ್ಲಿ ಜೂನ್ 18 1836ರಂದು ಜನಿಸಿದ ಚಂಪಾ ಇಂಗ್ಲಿಷ್ ಎಂಎ ಪದವೀಧರರು. ಬ್ರಿಟೀಷ್ ಕೌನ್ಸಿಲ್ ವಿದ್ಯಾರ್ಥಿವೇತನ ಪಡೆಯುವುದರ ಮೂಲಕ ಲೀಡ್ಸ್ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದ ಸ್ನಾತಕೋತ್ತರ ಪದವಿ ಗಳಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಲೇ ಕನ್ನಡ ಸಾರಸ್ವತ ಲೋಕವನ್ನು ಅಪ್ಪಿಕೊಂಡವರು ಚಂಪಾ. ಚಂಪಾ ಅವರ ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಅಕ್ಷರಗಳಲ್ಲಿ ಕಾಣುವುದಕ್ಕಿಂತಲೂ ಹೆಚ್ಚಾಗಿ ಅವರ ದನಿಯಲ್ಲಿ ಕಾಣುವುದು ಸೂಕ್ತ. 1975ರ ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಸಂದರ್ಭದಲ್ಲೇ ಕರ್ನಾಟಕದ ಸಾಹಿತ್ಯ ವಲಯದಲ್ಲಿ, ಸಾಂಸ್ಕೃತಿಕ ಲೋಕದಲ್ಲಿ ನಡೆಯುತ್ತಿದ್ದ ವಿಪ್ಲವಕಾರಿ ಪಲ್ಲಟಗಳಿಗೆ ಸಾಕ್ಷಿಯಾಗಿ ನಿಂತವರು ಚಂಪಾ. ಹಾಗೆಯೇ, ಬದಲಾದ ಸಂದರ್ಭದ ಅಗತ್ಯತೆ, ಅನಿವಾರ್ಯತೆಗಳಿಗನುಗುಣವಾಗಿ ತಮ್ಮ ಸಾಹಿತ್ಯದ ಮೂಲಕ ಪ್ರೇರಣೆ ನೀಡಿದವರೂ ಹೌದು.

1964ರಲ್ಲಿ ಚಂಪಾ ಆರಂಭಿಸಿದ ಸಂಕ್ರಮಣ ಸಾಹಿತ್ಯಕ ಪತ್ರಿಕೆ ಕೇವಲ ಅಕ್ಷರಗಳ ಆಗರವಾಗಿ ಉಳಿಯಲಿಲ್ಲ, ಇಂದಿಗೂ ಸಾಂಸ್ಕೃತಿಕ ಪ್ರತಿರೋಧದ ಅಕ್ಷರ ನೆಲೆಯಾಗಿಯೇ ಮುಂದುವರೆದಿದೆ. ಇಂದಿಗೂ ಸಹ ಸಂಕ್ರಮಣ ಕನ್ನಡ ಸಾಹಿತ್ಯ ಲೋಕದ ಮೇರು ಚುಕ್ಕೆಯಾಗಿ ಕಂಗೊಳಿಸುತ್ತಿದೆ ಎಂದರೆ ಅದಕ್ಕೆ ಕಾರಣ ಈ ಪತ್ರಿಕೆಯ ಪುಟಗಳನ್ನು ಅಲಂಕರಿಸುತ್ತಿದ್ದ, ಅಲಂಕರಿಸುತ್ತಿರುವ ಸಾಂಸ್ಕೃತಿಕ ದನಿಗಳು, ಪ್ರತಿರೋಧದ ಛಾಯೆಗಳು ಮತ್ತು ಸಾಮಾಜಿಕ ಕಳಕಳಿಯುಳ್ಳ ಪರಿವರ್ತನೆಯ ಆಶಯಗಳು. 1970-80ರ ದಶಕದಲ್ಲಿ ಕರ್ನಾಟಕ ದಲಿತ ಚಳುವಳಿಗಳಿಗೆ ಒಂದು ಹೊಸ ಸ್ಪರ್ಶ ನೀಡಿದ ಸಂದರ್ಭದಲ್ಲಿ, ನೋವುಂಡ ಜನತೆಗೆ ದನಿಯಾಗಿ, ಶೋಷಿತರ ದನಿಗೆ ಒಂದು ಕಾಯಕಲ್ಪವನ್ನು ಒದಗಿಸಿದವರಲ್ಲಿ ಚಂಪಾ ಪ್ರಮುಖರು. ವೈದಿಕಶಾಹಿಯ ಶೋಷಣೆ ಮತ್ತು ಶ್ರೇಣೀಕೃತ ಜಾತಿ ವ್ಯವಸ್ಥೆಯ ತಾರತಮ್ಯಗಳ ವಿರುದ್ಧ ದಲಿತ ಸಮುದಾಯದಲ್ಲಿ, ಶೋಷಿತ ವರ್ಗಗಳಲ್ಲಿ ಮೂಡಿದ ಪ್ರತಿರೋಧದ ದನಿಗಳಿಗೆ ಸಂಕ್ರಮಣ ಪತ್ರಿಕೆ ಅಕ್ಷರದ ಮೂಲಕ ದನಿಯಾದರೆ, ಚಂಪಾ ವ್ಯಕ್ತಿಗತವಾಗಿ ದನಿಯಾಗಿ ಮೂಡಿದ್ದರು.

ಕತೆ, ಕಾವ್ಯ, ನಾಟಕ, ಸಂಪಾದನೆ ಮತ್ತು ಅಂಕಣ ಬರಹ ಹೀಗೆ ಸಾಹಿತ್ಯ ಕೃಷಿಯ ಎಲ್ಲ ಆಯಾಮಗಳಲ್ಲೂ ತಮ್ಮ ಗಟ್ಟಿಧ್ವನಿಯನ್ನು ದಾಖಲಿಸುತ್ತಾ ನಡೆದ ಚಂಪಾ ಬಂಡಾಯ ಸಾಹಿತ್ಯ ಚಳುವಳಿಗೆ ಹೊಸ ಆಯಾಮವನ್ನು ದೊರಕಿಸಿಕೊಟ್ಟವರಲ್ಲಿ ಪ್ರಮುಖರು. ತುರ್ತುಪರಿಸ್ಥಿತಿಯ ಜೈಲುವಾಸದ ನಂತರ ಸಂಪೂರ್ಣವಾಗಿ ತಮ್ಮನ್ನು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದ ಚಂಪಾ ದಲಿತ ಚಳುವಳಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ತಮ್ಮ ನಾಟಕಗಳ ಮೂಲಕ, ಕಾವ್ಯದ ಮೂಲಕ ಶೋಷಿತರ ದನಿಯಾಗಿ ಮೂಡಿಬಂದಿದ್ದಾರೆ. ಬಾನುಲಿ, ಮಧ್ಯಬಿಂದು, ಗಾಂಧಿ ಸ್ಮರಣೆ, ಹೂವು ಹೆಣ್ಣು ತಾರೆ, ಅರ್ಧಸತ್ಯದ ಹುಡುಗಿ (ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ), ಮುಂತಾದ ಕವನ ಸಂಕಲನಗಳು, ಕೊಡೆಗಳು, ಅಪ್ಪ, ಟಿಂಗರ ಬುಡ್ಡಣ್ಣ, ಕತ್ತಲರಾತ್ರಿ ಮುಂತಾದ ನಾಟಕಗಳು ಮತ್ತು ನನ್ನ ಹಾಡಿನ ಹಳ್ಳ, ಚಂಪಾದಕೀಯ, ನನ್ನ ಗುರು ಗೋಕಾಕ್, ಅಕ್ಷರ ಲೋಕದ ಆಕೃತಿಗಳು, ನಿತ್ಯ ವರ್ತಮಾನ ಮುಂತಾದ ಪ್ರಬಂಧಗಳ ಸಂಕಲನದ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯ ಕೊಡುಗೆ ಸಲ್ಲಿಸಿರುವ ಚಂಪಾ ಮೂಲತಃ ಪ್ರತಿರೋಧದ ದನಿಯಾಗಿ ಗುರುತಿಸಿಕೊಂಡವರು. ವ್ಯವಸ್ಥೆಯೊಡನೆ ರಾಜಿಯಾಗದ, ಬಂಡಾಯದ ದನಿಯಾಗಿಯೇ ಬದುಕಿದವರೂ ಸಹ.

1996ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಾರಥ್ಯ ವಹಿಸಿ, 2004ರಿಂದ ನಾಲ್ಕು ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿಗೆ ಮುಂದಾಳತ್ವ ನೀಡುವ ಮೂಲಕ ಕನ್ನಡದ ಯುವ ಲೇಖಕರಿಗೆ, ಕವಿ ಸಾಹಿತಿಗಳಿಗೆ ಉತ್ತೇಜನ ನೀಡುವಂತಹ ಕ್ರಮಗಳನ್ನು ಕೈಗೊಂಡಿದ್ದು ಚಂಪಾ ಅವರ ಹೆಗ್ಗಳಿಕೆ. ಬಂಡಾಯ ಸಾಹಿತ್ಯದ ದನಿ ಕ್ಷೀಣಿಸುತ್ತಿದೆ ಎಂಬ ನೋವಿನೊಂದಿಗೇ ಮತ್ತೊಮ್ಮೆ ಚಿಗುರೊಡೆಯುತ್ತದೆ ಎಂಬ ಭರವಸೆಯನ್ನೂ ಹೊಂದಿದ್ದ ಚಂಪಾ ಶೋಷಿತರ, ದಮನಿತರ ಮತ್ತು ಅವಕಾಶವಂಚಿತರ ಸಾಹಿತ್ಯಕ್ಕೆ ತಮ್ಮ ಸಂಕ್ರಮಣದ ಮೂಲಕ ಅಕ್ಷರಾವಕಾಶ ನೀಡಿದರೆ ತಮ್ಮ ಪ್ರಖರ ಉಪನ್ಯಾಸಗಳ ಮೂಲಕ, ಬರವಣಿಗೆಯ ಮೂಲಕ, ಭಾಷಣಗಳ ಮೂಲಕ ಮುಕ್ತ ದನಿಯನ್ನೂ ನೀಡಿದ್ದಾರೆ. ತಮ್ಮ ಸಾಹಿತ್ಯಕ ಸೇವೆಯೊಂದಿಗೇ ಜನಪರ ಚಳುವಳಿಗಳಲ್ಲೂ ಸಕ್ರಿಯವಾಗಿದ್ದ ಚಂಪಾ ಗೋಕಾಕ್ ಚಳುವಳಿಯ ಮುಂಚೂಣಿಯಲ್ಲಿದ್ದವರು. ಮಂಡಲ್ ಚಳುವಳಿಗೆ ದನಿ ನೀಡಿದವರು. ಜಾತಿ ದೌರ್ಜನ್ಯಗಳ ವಿರುದ್ಧ ಪ್ರಖರ ದನಿ ಎತ್ತಿದವರು.

ಸಮಾಜದಲ್ಲಿ ಬೇರೂರಿದ್ದ ಕೋಮುವಾದ, ಮತಾಂಧತೆ, ಕೋಮು ದ್ವೇಷ, ಮತೀಯ ದ್ವೇಷ, ಜಾತಿ ದೌರ್ಜನ್ಯದ ಬೇರುಗಳನ್ನು ಕಿತ್ತೊಗೆಯಲು ಎಲ್ಲ ರೀತಿಯ ಪ್ರಗತಿಪರ ಚಳುವಳಿಗಳಲ್ಲೂ ಮುಂಚೂಣಿಯಲ್ಲಿರುತ್ತಿದ್ದ ಚಂಪಾ ಸಾಹಿತ್ಯವನ್ನು ಅಕ್ಷರಗಳಲ್ಲಿ ಬಂಧಿಸಿಟ್ಟವರಲ್ಲ. ಸಾಹಿತ್ಯದಿಂದ ಸಮಾಜ ಬದಲಾವಣೆ ಸಾಧ್ಯವಿಲ್ಲ, ನಾಟಕಗಳು ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯವಿಲ್ಲ ಎಂಬ ವಿತಂಡವಾದ ತಾಂಡವಾಡುತ್ತಿರುವ ಇವತ್ತಿನ ಸಂದರ್ಭದಲ್ಲಿ ಚಂಪಾ ಅವರ ಧ್ವನಿ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಭಾಷಾ ಚಳುವಳಿಗಳಲ್ಲೂ ಮುಂದಾಳತ್ವ ವಹಿಸಿ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ಅನುಷ್ಠಾನಗೊಳಿಸಲು ಅವಿರತ ಹೋರಾಡಿದ ಚಂಪಾ ಒಂದು ಹಂತದಲ್ಲಿ, ಕನ್ನಡ ಮಾಧ್ಯಮಕ್ಕಾಗಿ ಪರವಾನಗಿ ಪಡೆದು ಆಂಗ್ಲ ಮಾಧ್ಯಮದಲ್ಲಿ ನಡೆಸುತ್ತಿದ್ದ ಎರಡು ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಿಸುವುದರಲ್ಲಿ ಯಶಸ್ವಿಯಾಗಿದ್ದರು.

ಕರ್ನಾಟಕದ ಸಾಂಸ್ಕೃತಿಕ ರಾಜಕಾರಣ ಕೋಮುವಾದ-ಜಾತಿಶ್ರೇಷ್ಠತೆ-ಮತಾಂಧತೆಯ ಮಾಲಿನ್ಯದಿಂದ ಕಲುಷಿತವಾಗುತ್ತಿರುವ ಈ ಸಂದರ್ಭದಲ್ಲಿ ಚಂಪಾ ಮತ್ತು ಅವರ ಧ್ವನಿ ಹೆಚ್ಚು ಮೌಲಿಕ ಎನಿಸುತ್ತದೆ. ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿ, ಪುಸ್ತಕ ಪ್ರಾಧಿಕಾರ, ವಿಶ್ವವಿದ್ಯಾಲಯಗಳು ಹೀಗೆ ಬೌದ್ಧಿಕ ಜ್ಞಾನಾಭಿವೃದ್ಧಿಯ ಎಲ್ಲ ಆಕರಗಳಲ್ಲೂ ಮತಾಂಧ ಶಕ್ತಿಗಳು ತಾಂಡವಾಡುತ್ತಾ ಕನ್ನಡ ಸಾಹಿತ್ಯ ಲೋಕದ ಬೇರುಗಳನ್ನು, 1970-80ರ ದಶಕದಲ್ಲಿ ಬಿತ್ತಿದ ಪ್ರತಿರೋಧದ ಬೀಜಗಳನ್ನು ನಿಷ್ಕ್ರಿಯಗೊಳಿಸುತ್ತಿರುವ ಈ ಸಂದರ್ಭದಲ್ಲಿ ಚಂಪಾ ಹೆಚ್ಚು ಪ್ರಸ್ತುತವಾಗುವಷ್ಟೇ ಹತ್ತಿರವೂ ಆಗುತ್ತಾರೆ. ಗಟ್ಟಿಯಾಗುತ್ತಿರುವ ಜಾತಿ ಪ್ರಜ್ಞೆ, ಶಿಥಿಲವಾಗುತ್ತಿರುವ ಭ್ರಾತೃತ್ವದ ಸಂವೇದನೆ ಮತ್ತು ಕ್ಷೀಣಿಸುತ್ತಿರುವ ಸಮಾನತೆಯ ದನಿಗಳ ನಡುವೆ ಒಂದು ಪ್ರಖರ ಪ್ರತಿರೋಧದ ನೆಲೆಯಾಗಿ ಚಂಪಾ ನಮ್ಮ ನಡುವೆ ಇರಬೇಕಿತ್ತು ಎನಿಸುವುದು ಸಹಜ. ಆದರೆ ಬದುಕು ಅವಕಾಶ ನೀಡುವುದಿಲ್ಲ ಎನ್ನುವುದೂ ಅಷ್ಟೇ ವಾಸ್ತವ.

ಶೋಷಿತರ ದನಿಯಾಗಿ ಬದುಕುವ ಒಬ್ಬ ಸಾಹಿತಿ, ಕಲಾವಿದ "ಅಜಾತಶತ್ರು" ಆಗಿ ಬದುಕಲು ಸಾಧ್ಯವಿಲ್ಲ. ಅಗಲಿದ ನಂತರವೂ ಹಾಗೆ ಉಳಿಯಲು ಸಾಧ್ಯವಿಲ್ಲ. ಚಂಪಾ ಸಹ ಎಂದಿಗೂ ಅಜಾತಶತ್ರು ಆಗಿರಲಿಲ್ಲ. ಆದರೆ ಶೋಷಿತರ ಸಾಹಿತ್ಯಕ ದನಿಯಾಗಿ, ಸಾಂಸ್ಕೃತಿಕ ಪ್ರತಿನಿಧಿಯಾಗಿ, ಸಾಮಾಜಿಕ ವಕ್ತಾರರಾಗಿ, ಪ್ರಧಾನಿ ಮೋದಿ (ಅವಹೇಳನಕಾರಿಯಾಗಿ) ಹೇಳಿದಂತೆ " ಆಂದೋಲನಜೀವಿ "ಯಾಗಿ ಆರು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕದ ಸಾರಸ್ವತ ಲೋಕಕ್ಕೆ, ಸಾಹಿತ್ಯ ವಲಯಕ್ಕೆ, ಜನಪರ ಚಳುವಳಿಗಳಿಗೆ, ಶೋಷಿತರ ಪ್ರತಿರೋಧಗಳಿಗೆ ಧ್ವನಿಯಾಗಿ ನಿಂತ ಚಂದ್ರಶೇಖರ ಪಾಟೀಲರು ಶಾಶ್ವತವಾಗಿ ಸಂಕ್ರಮಣದ ಹರಿಕಾರರಾಗಿಯೇ ನಮ್ಮ ನಡುವೆ ಉಳಿಯಲಿದ್ದಾರೆ.

ಹೋಗಿ ಬನ್ನಿ ಚಂಪಾ !! ನೀವೇ ಹೇಳಿರುವಂತೆ :

" ಹಕ್ಕಿಯಾಗಿ ರೆಕ್ಕೆ ಬಿಚ್ಚುತ್ತಾ ಚಿಕ್ಕೆಯಾಗಿ ಚಿಮುಕುತ್ತಾ ಇದ್ದವರ ನೆನಪಿನ ಗುದ್ದಿನಲ್ಲಿ ಗುದ್ದಲಿಯಾಗಿ " ಇದ್ದುಬಿಡಿ.

★ ನಾ. ದಿವಾಕರ್

# ಕನ್ನಡ ಲಿಬರೇಶನ್

## ಪರಿವಿಡಿ


| | |
|---|---|
| ಅಗಲಿದ ಬಂಡಾಯ-ಪ್ರತಿರೋಧದ ದಿಟ್ಟ ಧ್ವನಿ - ಚಂಪಾ | 2 |
| ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಅವರ ಕೊಡುಗೆಯನ್ನು ನಿರ್ನಾಮಗೊಳಿಸುತ್ತಿರುವ ಆರ್ ಎಸ್ಎಸ್ | 3 |
| ಕರ್ನಾಟಕದಲ್ಲಿ ಮೊಟ್ಟೆ ಸೇವನೆಯ ವಿರುದ್ಧದ ಕೊಳಿತ ರಾಜಕೀಯ | 5 |
| ಧಾರ್ಮಿಕ ಸ್ವಾತಂತ್ರ್ಯ ಹಕ್ಕು "ಸಂರಕ್ಷಣೆ"; ಮಸೂದೆಯಲ್ಲಿರುವುದೇನು? | 6 |
| ಖುರ್ರಮ್ ಪರ್ವೇಜ್ ಅವರನ್ನು ಬಿಡುಗಡೆ ಮಾಡಬೇಕು | 7 |
| ಕರ್ನಾಟಕ ಪ್ರಗತಿಪರ ಪರಿಸರ ರಕ್ಷಣಾ ಹೋರಾಟ ಸಮಿತಿ ರಚನೆ | 7 |
| AFSPA ರದ್ದುಗೊಳಿಸಬೇಕು! | 8 |
| ಹಿಂದುತ್ವದ ನಾಯಕರುಗಳು ದ್ವೇಷದ ಭಾಷಣವನ್ನು ಅಸ್ತ್ರವನ್ನಾಗಿಸಿಕೊಂಡಿದ್ದಾರೆ | 9 |
| ಕಾಂ. ದೀಪಾಂಕರ್ ಭಟ್ಟಾಚಾರ್ಯ ಅವರೊಂದಿಗೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮಾರ್ಕ್ಸಿಸ್ಟ್ ಸ್ಟಡೀಸ್ ಕಾರ್ಯಕ್ರಮ | 13 |
| ಎಐಎಲ್ಎಜೆನ (AILAJ) ರಾಷ್ಟ್ರೀಯ ಮಟ್ಟದ ಮೊದಲ ಸಭೆ ಬೆಂಗಳೂರಿನಲ್ಲಿ | 14 |
| ಮಾರ್ಕ್ಸ್‌ವಾದ ಎಂದರೇನು? | 16 |
| ಬೆಂಗಳೂರಿನ ಐಟಿಐ ಲಿಮಿಟೆಡ್ ಕಾರ್ಮಿಕರ ಅಹೋರಾತ್ರಿ ಹೋರಾಟ | 17 |
| ಮಹಿಳೆಯ ವಿವಾಹದ ಕನಿಷ್ಟ ವಯಸ್ಸು ಮತ್ತು ರಕ್ಷಣೆ | 19 |
| ನಮ್ಮ ಕಾರ್ಯಕ್ರಮಗಳು | 20 |


**ಮುಖಪುಟ ಚಿತ್ರಗಳು: ಅವನಿ ಚೋಕ್ಷಿ ಮತ್ತು ಡೆಕ್ಕನ್ ಹೆರಾಲ್ಡ್**


**ಸಂಪಾದಕೀಯ ಮಂಡಳಿ**
ಕ್ಲಿಫ್ಟನ್ ಡಿ' ರೋಜಾರಿಯೋ
ಡಾ । ವಿ. ಲಕ್ಷ್ಮಿ ನಾರಾಯಣ
ನಾ. ದಿವಾಕರ್
ರತಿ ರಾವ್
ಪಿ.ಆರ್.ಎಸ್ ಮಣಿ
ಲೇಖಾ ಅಡವಿ



ಸಂಪಾದಕೀಯ ಇ-ಮೇಲ್:
kannadaliberation@gmail.com


## ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಅವರ ಕೊಡುಗೆಯನ್ನು ನಿರ್ನಾಮಗೊಳಿಸುತ್ತಿರುವ ಆರ್ ಎಸ್ಎಸ್

ಆರ್ ಎಸ್ಎಸ್ ಮತ್ತು ಬಿಜೆಪಿಯ ಪ್ರಯೋಗ ಶಾಲೆಯಾಗಿರುವ ಕರಾವಳಿ ಕರ್ನಾಟಕದಲ್ಲಿ ಅವರೇ ಸೃಷ್ಟಿಸಿರುವ ಹಿಜಾಬ್ ವಿವಾದವನ್ನು ಕುರಿತು ಬರೆಯುವ ಮೊದಲು, ಮಹಿಳೆಯರು ಶಿಕ್ಷಣ ಪಡೆದುಕೊಳ್ಳುವಲ್ಲಿ ಕ್ರಾಂತಿಕಾರಿ ಹೋರಾಟ ನಡೆದ ಬಗ್ಗೆ ಚುಟುಕು ಇತಿಹಾಸವನ್ನು ಮೆಲಕು ಹಾಕಲು ಬಯಸುತ್ತೇವೆ. ದಲಿತರು, ಶೂದ್ರರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಶಿಕ್ಷಣ ಪಡೆಯುವುದು ಪಾಪವೆಂದು ಪರಿಗಣಿಸಿದ್ದ ಇತಿಹಾಸವಿರುವ ಈ ಸಮಾಜದಲ್ಲಿ, ಮೊದಲಿಗೆ, ಅವರೆಲ್ಲರಿಗೂ ಶಿಕ್ಷಣ ದೊರಕಬೇಕೆಂದು ಫುಲೆ ದಂಪತಿಗಳು ಮತ್ತು ಫಾತಿಮಾ ಶೇಖ್ ರವರು ಮಾಡಿದ ಕ್ರಾಂತಿಕಾರಿ ಹೋರಾಟದ ಫಲ ಅವರು ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. 1848 ರಲ್ಲಿ ಭಾರತದಲ್ಲಿ ಮೊಟ್ಟಮೊದಲ ಹೆಣ್ಣುಮಕ್ಕಳ ಶಾಲೆಯನ್ನು ಸ್ಥಾಪಿಸಲು ಫಾತಿಮ್ ಶೇಖ್ ರವರು ತಮ್ಮ ಮನೆಯನ್ನೇ ನೀಡಿದ್ದರು ಎಂಬುವುದು ಅವಿಸ್ಮರಣೀಯ. ಇದು ಅವರ ಉದಾತ್ತ ಕಾರ್ಯ ಮಾತ್ರವಲ್ಲ, ಶೌರ್ಯ ಮತ್ತು ಅಪಾರ ಧೈರ್ಯದ ಕ್ರಿಯೆಯಾಗಿದೆ. ಅಂದಿನ ಕಾಲದಲ್ಲಿ ಮನುವಾದ ಮತ್ತು ಬ್ರಾಹ್ಮಣವಾದವನ್ನು ಪ್ರತಿಪಾದಿಸುತ್ತಿದ್ದವರು ತುಳಿತಕ್ಕೊಳಪಟ್ಟ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವವರನ್ನು ದಂಡಿಸುತ್ತಿದ್ದ ಸನ್ನಿವೇಶದಲ್ಲೂ, ಫಾತಿಮಾ ಶೇಖ್ ಮನೆ-ಮನೆಗೆ ತೆರಳಿ ಕುಟುಂಬಗಳನ್ನು ಮತ್ತು ವಿಶೇಷವಾಗಿ ಮುಸ್ಲಿಂ ಸಮುದಾಯದ ಪೋಷಕರನ್ನು ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳುವಂತೆ ಮನವೊಲಿಸಿದರು. ಈ ಕಾರಣದಿಂದ ತುಳಿತಕ್ಕೊಳಪಟ್ಟ ಸಮುದಾಯದವರಿಗೆ ಶಿಕ್ಷಣ ದೊರಕಿತ್ತು. ಆ ಸಮಯದಲ್ಲಿ ಮೇಲ್ಜಾತಿ ಪುರುಷರು ಮತ್ತು ಮಹಿಳೆಯರು ಅವರ ಮೇಲೆ ಮಣ್ಣು ಮತ್ತು ಸಗಣಿ ಎಸೆದರು. ಫಾತಿಮಾರವರು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳಿಂದ ತೀವ್ರ ದ್ವೇಷ ಮತ್ತು ವಿರೋಧವನ್ನು ಅನುಭವಿಸಬೇಕಾಯಿತು. ಆದರೂ ಹಠ ಬಿಡದ ಫಾತಿಮಾ ಶೇಖ್‌ರವರು ಶಿಕ್ಷಣವನ್ನು ಮುಂದುವರೆಸಿದರು ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ಪರಿಣಾಮವಾಗಿ, ವಿವಿಧ ಜಾತಿಗಳು ಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದ ಅನೇಕ ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯಲಾರಂಭಿಸಿದರು. ಅದೊಂದು ಸಾಧನೆಯಾಗಿತ್ತು; ಅಸಂಖ್ಯಾತ ಹುಡುಗಿಯರನ್ನು ಇಂದು ಗೌರವಾನ್ವಿತ ಮತ್ತು ಗೌರವಯುತ ಜೀವನವನ್ನು ನಡೆಸುವ ಸಾಲಿಗೆ ತಂದ ಸಾಧನೆ ಫುಲೆ ದಂಪತಿ ಮತ್ತು ಫಾತಿಮ್ ಶೇಖ್‌ಗೆ ಸಲ್ಲುತ್ತದೆ.

ಆದರೆ ಮತ್ತೆ ಅದೇ ಗತಕಾಲಕ್ಕೆ ಅಲ್ಪಸಂಖ್ಯಾತ ಸಮುದಾಯದ ಹೆಣ್ಣು ಮಕ್ಕಳನ್ನು ನೂಕುವ ಪ್ರಯತ್ನವನ್ನು ಫ್ಯಾಸಿಸ್ಟ್ ಧೋರಣೆಯ ಬಿಜೆಪಿ ಸರ್ಕಾರ ಮಾಡುತ್ತಿರುವುದು ದುರಾದೃಷ್ಟಕರ ಸಂಗತಿ. ಆ ನಿಟ್ಟಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದು ಕಾಲೇಜುಗಳ ಸಮವಸ್ತ್ರ ನೀತಿಯನ್ನು ಉಲ್ಲಂಘಿಸುತ್ತದೆ ಎಂಬ ಮೊಂಡವಾದವನ್ನು ಮುಂದಿಟ್ಟು ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ. ಹಿಂದೂ ವಿದ್ಯಾರ್ಥಿನಿಯರು ತಮ್ಮ ಸಮವಸ್ತ್ರದೊಂದಿಗೆ ತಮ್ಮ ಧಾರ್ಮಿಕ ನಂಬಿಕೆಗಳಾದ ಬಿಂದಿಗಳು, ತಾಯ್ತಗಳು, ತಿಲಕ, ಸಿಂಧೂರ ಮತ್ತು ತಾಳಿಗಳನ್ನು (ಮದುವೆಯಾಗಿದ್ದರೆ) ಧರಿಸುತ್ತಾರೆ; ಹಿಂದೂ ಬ್ರಾಹ್ಮಣ ಹುಡುಗರು ತಮ್ಮ ಸಮವಸ್ತ್ರದ ಜೊತೆಗೆ "ಜನಿವಾರ"ವನ್ನು ಧರಿಸುತ್ತಾರೆ; ಸಿಖ್ ಹುಡುಗರು ತಮ್ಮ ಸಮವಸ್ತ್ರದ ಜೊತೆಗೆ ಪೇಟವನ್ನು ಧರಿಸುತ್ತಾರೆ. ಇದ್ಯಾವುದಕ್ಕೂ ಅಡ್ಡಿ ಪಡಿಸದ ಸಮವಸ್ತ್ರ ನಿಯಮವು ಹಿಜಾಬ್‌ಗೆ ಮಾತ್ರ ನಿಷೇಧ ಹೇರುತ್ತಿದೆ ಎಂದರೇ ಕೋಮುವಾದವಲ್ಲದೆ ಮತ್ತೇನು

**ಮುಂದುವರೆಸಿದೆ...**

ಅಲ್ಲ. ಈ ಮೂಲಕ ಸರ್ಕಾರ ವಿದ್ಯಾರ್ಥಿಗಳ ವೈಯುಕ್ತಿಕ ಮತ್ತು ಘನತೆಯ ಹಕ್ಕನ್ನು ಉಲ್ಲಂಘಿಸುತ್ತದೆ. ಕೋಮುವಾದದ ಭಾಗವಾಗಿ ಬಲವಂತವಾಗಿ ಹಿಜಾಬ್ ತೆಗಿಸುವ ಸರ್ಕಾರದ ಕ್ರಮವನ್ನು ನಾವು ಖಂಡಿಸಬೇಕಾಗಿದೆ. ಹಾಗೆಯೇ, ಕಾಲೇಜುಗಳು "ಅಸಭ್ಯ" ಎಂದು ಭಾವಿಸುವ ಬಟ್ಟೆಗಳನ್ನು ಧರಿಸಿದ್ದಕ್ಕಾಗಿ ಮಹಿಳೆಯರನ್ನು ಶಿಕ್ಷಿಸುವ ಪಿತೃಪ್ರಧಾನ ವ್ಯವಸ್ಥೆಯನ್ನು ಸಹ ನಾವು ಪ್ರತಿಭಟಿಸಬೇಕು.

ಹಿಜಾಬ್‌ಗಳನ್ನು ತೆಗೆಯದಿದ್ದರೆ, ಶಿಕ್ಷಣ ಪಡೆಯುವ ಹಕ್ಕನ್ನು ಕಳೆದುಕೊಳ್ಳುತ್ತೀರೆಂಬ ಭಯವನ್ನುಂಟುಮಾಡುವುದು ಸಹ ಒತ್ತಾಯವಾಗಿದೆ. ಇಸ್ಲಾಮ್‌ಗೆ ಹಿಜಾಬ್ ಅಗತ್ಯವೇ ಅಥವಾ ಇಲ್ಲವೇ ಎಂಬುದು ಅಪ್ರಸ್ತುತವಾಗಿದೆ. ಸಾಮಾಜಿದಲ್ಲಿರುವ ವಾಸ್ತವ ಸಂಗತಿಯೆಂದರೆ ಮುಸ್ಲಿಂ ಮಹಿಳೆಯರು ಹಿಜಾಬ್‌ಗಳನ್ನು ಧರಿಸುತ್ತಾರೆ. ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಹಿಜಾಬ್ ಮೇಲೆ ನಿಷೇಧ ಹೇರುವುದು ಮುಸ್ಲಿಂ ಮಹಿಳೆಯರ ಸಾಂವಿಧಾನಿಕ ಹಕ್ಕಾದ 'ಖಾಸಗಿತನ' ಮತ್ತು 'ದೈಹಿಕ ಸಮಗ್ರತೆ', ಮುಸ್ಲಿಂ ಮಹಿಳೆಯರ 'ಶಿಕ್ಷಣ' ಮತ್ತು 'ಧರ್ಮವನ್ನು ಮುಕ್ತವಾಗಿ ಆಚರಿಸುವ' ಹಕ್ಕನ್ನು ಉಲ್ಲಂಘಿಸುತ್ತದೆ.

"ಪಿತೃಪ್ರಧಾನ ಹಿಜಾಬ್ ವ್ಯವಸ್ಥೆ" ಗೆ ಸ್ತ್ರೀ ವಿರೋಧಿ ಎಂಬ ರೂಪವನ್ನು ಕೊಟ್ಟು ಕೋಮು ತಾರತಮ್ಯ ಮತ್ತು ಬಹಿಷ್ಕಾರವನ್ನು ಆಚರಿಸಲಾಗುತ್ತಿದೆ. ಅದೇ ಸಂಘಿ ಶಕ್ತಿಗಳು ಆನ್ ಲೈನ್‌ನಲ್ಲಿ ಮುಸ್ಲಿಂ ಮಹಿಳೆಯರನ್ನು ಹರಾಜು ಮಾಡುತ್ತಿದ್ದಾಗ ಸಂತೋಷದಿಂದ ಭಾಗವಹಿಸುತ್ತಾರೆ ಮತ್ತು ಹಿಂದೂ-ಪರಮಾಧಿಕಾರ ಹೊಂದಿರುವ ಸಮಾವೇಶಗಳಲ್ಲಿ ಭಾಷಣಕಾರರು ಮುಸ್ಲಿಂ ಮಹಿಳೆಯರ ಮೇಲೆ ಸಾಮೂಹಿಕ ಲೈಂಗಿಕ ಗುಲಾಮಗಿರಿಗೆ ಮತ್ತು ಅತ್ಯಾಚಾರಕ್ಕೆ ಕರೆ ನೀಡುವಾಗ ಚಪ್ಪಾಳೆ ತಟ್ಟಿ ಹುರಿದುಂಬಿಸುತ್ತಾರೆ.

ಸಾಂವಿಧಾನಿಕ ನೈತಿಕತೆಯ ತತ್ವಗಳು ಸ್ಪಷ್ಟವಾಗಿದ್ದಾವೆ. ಧರ್ಮವನ್ನು ಆಚರಣೆ ಮಾಡಲು ಸಾಂವಿಧಾನಿಕ ಸ್ವಾತಂತ್ರ್ಯವಿದೆ ಎಂದರೆ ವ್ಯಕ್ತಿಗಳು ತಮ್ಮ ಸ್ವಂತ ಧರ್ಮವನ್ನು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ವ್ಯಾಖ್ಯಾನಿಸಲು ಮತ್ತು ಆಚರಣೆ ಮಾಡಲು ಸ್ವಾತಂತ್ರ್ಯವಿದೆ ಎಂದರ್ಥ.

ಸಂಘಪರಿವಾರದ ಗುಂಪುಗಳು ಎಲ್ಲಾ ರೀತಿಯ ಕೋಮು ದ್ವೇಷದ ಅಪರಾಧಗಳಲ್ಲಿ ತೊಡಗಿಸಿಕೊಂಡಿರುವ ಕರ್ನಾಟಕದಲ್ಲಿ ಈ ಹಿಜಾಬ್‌ಗಳ ನಿಷೇಧವು ನಡೆಯುತ್ತಿದೆ ಎಂಬುದನ್ನು ನಾವು ಮರೆಯುವಂತಿಲ್ಲ – ಮುಸ್ಲಿಮರನ್ನು ಹಿಂದೂಗಳಿಂದ ಪ್ರತ್ಯೇಕಿಸಲು ಪ್ರಯತ್ನಿಸಲಾಗುತ್ತಿದೆ, ಮುಸ್ಲಿಂ ವಿದ್ಯಾರ್ಥಿನಿಯರ ಮನೆಗೆ ಭೇಟಿ ನೀಡುವ ಹಿಂದೂ ವಿದ್ಯಾರ್ಥಿನಿಯರನ್ನು ಬೆದರಿಸುವುದು; ಕಾಲೇಜು ಬಸ್ಸಿನಿಂದ ಹಿಂದೂ-ಮುಸ್ಲಿಂ ಹುಡುಗ ಹುಡುಗಿಯರನ್ನು ಬಲವಂತವಾಗಿ ಇಳಿಸುವುದು; ಪರಸ್ಪರ ಸ್ನೇಹಿತರಾಗಿರುವ ಹಿಂದೂ-ಮುಸಲ್ಮಾನ ಹುಡುಗ-ಹುಡುಗಿಯರನ್ನು ಹೊಡೆಯುವುದು,ಮತ್ತು ಮುಂತಾದ ಅಪರಾಧಿಕ ಚಟುವಟಿಕೆಗಳನ್ನು ಸೇರಿದಂತೆ, ನಿರಂತರವಾಗಿ ನಡೆಯುತ್ತಲೇ ಇದ್ದಾವೆ.

ಹಿಜಾಬ್ ಧರಿಸಿರುವ ಮಹಿಳೆಯರನ್ನು ಮುಸ್ಲಿಂನವರು ನಡೆಸು ಶಾಲೆಗಳು ಮತ್ತು ಕಾಲೇಜುಗಳಲ್ಲಿ ಓದುವಂತೆ ಒತ್ತಡ ಹೇರುತ್ತಿರುವ ಕ್ರಮವು ಮುಸ್ಲಿಮರನ್ನು ಪ್ರತ್ಯೇಕಿಸುವ ದೊಡ್ಡ ಹುನ್ನಾರವನ್ನು ಹೊಂದಿದೆ. ಅಲ್ಲದೆ ಈ ಕ್ರಮದಿಂದ ಮುಸ್ಲಿಮರನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆದುಹಾಕುವುದು ಹಾಗೂ ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳ ನಡುವಿನ ಸಂವಹನದ ವ್ಯಾಪ್ತಿಯನ್ನು ಕಡಿಮೆ ಮಾಡುವುದರ ಮೂಲಕ ಹಿಂದೂಗಳ ಮೂಲಭೂತೀಕರಣವನ್ನು ಸಕ್ರಿಯಗೊಳಿಸುವುದಾಗಿರುತ್ತದೆ.

ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿರುವ ದಲಿತ-ದಮನಿತ ಸಮುದಾಯಗಳ ಬಡ ಯುವಕ-ಯುವತಿಯರನ್ನು ಮೂಲಭೂತವಾದಿಗಳನ್ನಾಗಿಸಲು ಮನುವಾದ ಮತ್ತು ಬ್ರಾಹ್ಮಣವಾದದ ಪ್ರಯತ್ನ ನಡೆಯುತ್ತಿದೆ ಎಂಬುದನ್ನು ನಾವು ಗುರುತಿಸಬೇಕು. ಸಂಘಪರಿವಾರವು, ಚಾರಿತ್ರಿಕವಾಗಿ ಶಿಕ್ಷಣದ ನಿರಾಕರಣೆಗೊಳಪಟ್ಟಿದ್ದ ಈ ಯುವಜನರಿಗೆ ಹಿಂದುತ್ವದ ಅಮಲು ತುಂಬಿ ಮೂಲಭೂತವಾದಿಗಳನ್ನಾಗಿಸುತ್ತಿದೆ ಮತ್ತು ತಮ್ಮ ಕೋಮುವಾದಿ ವಿಷಬೀಜ ಬಿತ್ತಲು ಇವರನ್ನು ಬಳಸಿಕೊಳ್ಳುತ್ತಿದೆ.

ಕರಾವಳಿ ಭಾಗದಲ್ಲಿ ಉದ್ಭವವಾದ ಹಿಜಾಬ್ ವಿವಾದ ಇಂದು ರಾಜ್ಯಾದಾದ್ಯಂತ ಹಬ್ಬಿದೆ. ಆರ್.ಎಸ್.ಎಸ್ ನವರ ಈ ಕುತಂತ್ರವು ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸೇರಿದ ಬಡ ಮಕ್ಕಳ ಶಿಕ್ಷಣ ಭವಿಷ್ಯಕ್ಕೆ ತೊಂದರೆ ಉಂಟಾಗುತ್ತಿರುವುದು ಮಾತ್ರವಲ್ಲದೆ ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಉಳಿಸಿಕೊಳ್ಳುವ ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆಯನ್ನುಂಟು ಮಾಡುತ್ತಿದೆ.

ಕೋವಿಡ್‌ನಿಂದಾಗಿ ಕಳೆದ 2 ವರ್ಷಗಳಿಂದ ಮಕ್ಕಳು ಶಿಕ್ಷಣವಿಲ್ಲದೆ ಸಂಕಷ್ಟದಲ್ಲಿರುವಾಗ, ತಮ್ಮ ಅಮಲು ತುಂಬಿರುವ ಕಾರ್ಯಸೂಚಿಗಳ ಜಾರಿಗೆ, ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ದಲಿತ ಮತ್ತು ಇತರೆ ಶೋಷಿತ ಸಮುದಾಯಗಳ ಬಡ ಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿರುವ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ! ಧಿಕ್ಕಾರ!!. ಹಿಜಾಬ್ ಧರಿಸಿ ಬರುವ ಹೆಣ್ಣು ಮಕ್ಕಳ ವಿರುದ್ಧ ದಲಿತ ಮತ್ತು ಶೋಷಿತ ಸಮುದಾಯದ ಬಡ ಮಕ್ಕಳ ಹೆಗಲಿಗೆ ಕೇಸರಿ ಶಾಲು ಹಾಕಿ ಛೂ ಬಿಡುವ ಬಿಜೆಪಿ ಕುತಂತ್ರ ತಿಳಿಯದೆ ತಮ್ಮ ವಿದ್ಯಾಭ್ಯಾಸವನ್ನು ಹಾಳುಮಾಡಿಕೊಳ್ಳುತ್ತಿರುವ ದಲಿತ ಮತ್ತು ಶೋಷಿತ ಬಡ ಮಕ್ಕಳು ಎಚ್ಚೆತ್ತುಕೊಳ್ಳಬೇಕಾಗಿದೆ. ಅಲ್ಲದೆ ಮುಸ್ಲಿಂ ವಿದ್ಯಾರ್ಥಿನಿಯರಿಗೆ 'ಜಾಬ್'ಗಿಂತ 'ಹಿಜಾಬ್' ಮುಖ್ಯವಾಗಿದೆ ಎಂದು ಹೇಳುವ ಬಿಜೆಪಿ ನಾಯಕರುಗಳು ತಮ್ಮ ಆಡಳಿತದ ಅವಧಿಯಲ್ಲಿ ಜಾಬ್ ಸೃಷ್ಠಿ ಮಾಡುವಲ್ಲಿ ವಿಫಲವಾಗಿರುವುದನ್ನು ಮರೆಮಾಚಲೆಂದೇ ಹಿಜಾಬ್ ವಿವಾದವನ್ನು ಸೃಷ್ಠಿ ಮಾಡಿದ್ದಾರೆಂಬವುದು ಕೇಸರಿ ಶಾಲು ಹಾಕುವ ದಲಿತ ಮತ್ತು ಶೋಷಿತ ಬಡ ವಿದ್ಯಾರ್ಥಿಗಳಿಗೆ ಅರ್ಥವಾಗಬೇಕಾಗಿದೆ.

ಸರ್ಕಾರೀ ಶಿಕ್ಷಣ ವ್ಯವಸ್ಥೆಯು ಅವ್ಯವಸ್ಥೆಯಲ್ಲಿದೆ. ಸರ್ಕಾರೀ ಶಾಲಾ ಕಾಲೇಜುಗಳಲ್ಲಿ ಉತ್ತಮವಾದ ಸೌಲಭ್ಯತೆಗಳಿಗಾಗಿ, ಉತ್ತಮ ಶಿಕ್ಷಣಕ್ಕಾಗಿ, ವಿದ್ಯಾರ್ಥಿ ವೇತನದ ಹೆಚ್ಚಳಕ್ಕಾಗಿ, ಉತ್ತಮ ವಿದ್ಯಾರ್ಥಿ ನಿಲಯಗಳಿಗಾಗಿ, ಮತ್ತು ಇತರೆ ವಿದ್ಯಾರ್ಥಿ ಕೇಂದ್ರಿತ ಹಕ್ಕೊತ್ತಾಯಗಳನ್ನು ದೊರಕಿಸಲು ಆಗ್ರಹಿಸಬೇಕಾಗಿದೆ. ದಲಿತ, ಬಹುಜನ, ಅಲ್ಪಸಂಖ್ಯಾತ, ಮತ್ತು ಮಹಿಳಾ ವಿದ್ಯಾರ್ಥಿ ಸಮುದಾಯವು ತಮ್ಮ ಕಾಲೇಜುಗಳಲ್ಲಿ ವಿಭಜಿತ ರಾಜಕಾರಣವನ್ನು ತಿರಸ್ಕರಿಸುತ್ತಾ ಐಕ್ಯತೆಯನ್ನು ಕಾಪಾಡಬೇಕು ಮತ್ತು ಸಂವಿಧಾನದ ಮೌಲ್ಯಗಳಾದ ನ್ಯಾಯಾ, ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ಮೌಲ್ಯಗಳನ್ನು ಸಂರಕ್ಷಿಸಬೇಕು! ಆರ್ ಎಸ್ ಎಸ್-ಬಿಜೆಪಿ ಅವರ ವಿಭಜಿತ ರಾಜಕಾರಣವನ್ನು ತಿರಸ್ಕರಿಸಿ, ಶಾಲಾ-ಕಾಲೇಜುಗಳಲ್ಲಿ ಉತ್ತಮ ಸೌಲಭ್ಯತೆಗಳಿಗಾಗಿ ಆಗ್ರಹಿಸಬೇಕು. ★

# ಕರ್ನಾಟಕದಲ್ಲಿ ಮೊಟ್ಟೆ ಸೇವನೆಯ ವಿರುದ್ಧದ ಕೊಳೆತ ರಾಜಕೀಯ

ಕರ್ನಾಟಕದಲ್ಲಿ ಈಗ ಒಂದು ವಿಚಿತ್ರ ವಾದಂತಹ ಪ್ರತಿಭಟನೆ ಪ್ರಾರಂಭವಾಗಿದೆ. ಅದೇನೆಂದರೆ ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಅಂಗನವಾಡಿ ಮಕ್ಕಳಿಗೆ ಬೇಯಿಸಿದ ಮೊಟ್ಟೆ ಕೊಡುವ ಕರ್ನಾಟಕ ಸರ್ಕಾರದ ಕಾರ್ಯಕ್ರಮದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಆಗಿದೆ. ವಾಸ್ತವವಾಗಿ ದೇಶದ ಒಟ್ಟಾರೆ ಮಕ್ಕಳ ಆರೋಗ್ಯದ ಸ್ಥಿತಿಯನ್ನು ವೈಜ್ಞಾನಿಕವಾಗಿ ಮಾಡಿದ ಮೇಲೆ ಸರಕಾರವು ಅಂತರಾಷ್ಟ್ರೀಯ ಮಾನದಂಡಗಳನ್ನು ಅನುಸರಿಸಿ ಮಕ್ಕಳಿಗೆ ಕೋಳಿ ಮೊಟ್ಟೆ ಅಥವಾ ಬಾಳೆಹಣ್ಣು ನೀಡುವ ಕಾರ್ಯಕ್ರಮ ಜಾರಿ ಮಾಡಿದೆ.

ವಾಸ್ತವವಾಗಿ ಕೋಳಿ ಮೊಟ್ಟೆ ಒಂದು ಪರಿಪೂರ್ಣ ಆಹಾರ. ಅದರಲ್ಲಿ ಪಿಷ್ಟದ ಅಂಶ ಇಲ್ಲ . ಅಲ್ಲಿರುವುದು ಪ್ರೋಟೀನ್, ಕಬ್ಬಿಣ ಮುಂತಾದ ಅವಶ್ಯ ಪದಾರ್ಥಗಳು. ಮೊಟ್ಟೆ ಸೇವನೆಯಿಂದ ಶಾಲಾ ಮಕ್ಕಳ ಹಾಜರಾತಿ ಉತ್ತಮಗೊಂಡಿದೆ ಮತ್ತು ಆರೋಗ್ಯದಲ್ಲೂ ಸಹ ಸುಧಾರಣೆಯಾಗಿದೆ. ಇದು ಮಕ್ಕಳ ಆರೋಗ್ಯ ಸುಧಾರಣೆಗೆ ಒಂದು ಅವಶ್ಯವಾದ ಅನುಕೂಲಕರವಾದ ಕಾರ್ಯಕ್ರಮವಾಗಿದೆ. ಇದನ್ನು ರದ್ದು ಪಡಿಸುವ ಯಾವುದೇ ಪ್ರಯತ್ನವನ್ನು ವಿಫಲಗೊಳಿಸಲು ಬೇಕು.

ಇಂದಿನ ಭಾರತದಲ್ಲಿ ಇತ್ತೀಚಿಗೆ ಒಂದು ಬಲವಾದ ಬಲಪಂಥೀಯ ರಾಜಕೀಯದ ಜೊತೆಗಿದ್ದ ಸಾಂಸ್ಕೃತಿಕ ಆಕ್ರಮಣಕಾರಿ ಪ್ರವೃತ್ತಿ ಕಾಣಬರುತ್ತಿದೆ. ತಮ್ಮ ಸಸ್ಯಹಾರಿ ಉತ್ತಮ, ಮಾಂಸಾಹಾರಿ ತಾಮಸದ್ದು ಎಂಬ ಅವೈಜ್ಞಾನಿಕ ಬ್ರಾಹ್ಮಣಶಾಹಿ ಪ್ರಚಾರದ ಮೌಲ್ಯಗಳು ಕಾಣಿಸುತ್ತಿದೆ. ಭಾರತದಲ್ಲಿ ಆದಿಮಾನವನ ಕಾಲದಿಂದಲೂ ಮನುಷ್ಯ ಬದುಕಲು ಸಸ್ಯಾಹಾರ ಮತ್ತು ಮಾಂಸಾಹಾರವನ್ನು ಅವಲಂಬಿಸಿದ್ದಾನೆ. ಮಹಾಭಾರತದಲ್ಲಿ ಬ್ರಾಹ್ಮಣರು, ಕ್ಷತ್ರಿಯರು ಮಾಂಸಾಹಾರ ಸೇವಿಸುತ್ತಿರುವ ದಾಖಲೆ ಇದೆ. ಕಾಲಕ್ರಮದಲ್ಲಿ ಅನೇಕ ಬದಲಾವಣೆಗಳು ಕಂಡುಬಂದಿವೆ. ವಾಸ್ತವವಾಗಿ ಜೈನ ಧರ್ಮ ಒಂದೇ ಸಸ್ಯಹಾರಕ್ಕೆ ಒತ್ತು ನೀಡುತ್ತದೆ. ಅದರ ಕಠಿಣ ಜಾರಿಗೊಳಿಸುವ ನೀತಿಯಿಂದಾಗಿ ದುಡಿಯುವ ಜನಕ್ಕೆ ಆಕರ್ಷಕವಾಗಿ ಕಾಣಲಿಲ್ಲ. ಹೀಗಾಗಿ ಪ್ರಕೃತಿಯೊಡನೆ ಹೋರಾಡದ ವಣಿಕ ವರ್ಗಕ್ಕೆ ಅದು ಸೀಮಿತವಾಯಿತು. ದುಡಿಯುವ ವರ್ಗ ಬದುಕಲು ಪ್ರಕೃತಿಯೊಡನೆ ಸೆಣಸಲು ಬೇಕು. ಇಂದು ಬಂಗಾಳ ಮತ್ತು ಕಾಶ್ಮೀರದಲ್ಲಿ ಬ್ರಾಹ್ಮಣರು ಹೆಚ್ಚಾಗಿ ಮಾಂಸಾಹಾರವನ್ನು ಸೇವಿಸುತ್ತಾರೆ. ಕರ್ನಾಟಕದಲ್ಲಿ ಇಂದು ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವ ಕಾರ್ಯಕ್ರಮವನ್ನು ವಿರೋಧಿಸುತ್ತಿರುವವರು ಕೆಲವು ಲಿಂಗಾಯಿತ ಮಠಮಾನ್ಯಗಳು ಮತ್ತು ಜೈನ ಸಮುದಾಯದವರು ಮಾತ್ರ. ಆಧುನಿಕ ವೈದ್ಯ ಪದ್ಧತಿಯು ಮಾಂಸಾಹಾರವನ್ನು ಹತೋಟಿಯಲ್ಲಿಡಲು ಕೆಲವರಲ್ಲಿ ಮಾತ್ರ ಹೇಳುತ್ತದೆ ಆದರೆ ಎಲ್ಲೂ ಅದು ನಿಷೇಧವನ್ನು ಹೇರುವುದಿಲ್ಲ.

ನಾವುಗಳು ಇಂದು "ಊಟ ತನ್ನಿಚ್ಛೆ ಮತ್ತು ನೋಟ ಪರರಿಚ್ಛೆ" ಎಂಬ ಗಾದೆ ಮಾತಿನ ಸತ್ಯವನ್ನೇ ಎತ್ತಿಹಿಡಿಯುತ್ತ ಬಲಪಂಥೀಯ ಅವೈಜ್ಞಾನಿಕ ದಾಳಿಯನ್ನು ಎದುರಿಸುತ್ತ ಮಕ್ಕಳ ಆರೋಗ್ಯ ರಕ್ಷಣೆಯ ಹೋರಾಟಕ್ಕೆ ನಾವು ನಿಲ್ಲಬೇಕು. ★ ಡಾ । ವಿ. ಲಕ್ಷ್ಮಿ ನಾರಾಯಣ

## ಹೋರಾಟ




**ಬಿಬಿಎಂಪಿ ಪೌರಕಾರ್ಮಿಕರ ಸಂಘವು ದಿನಾಂಕ 14.12.2021ರಂದು ಕಾರ್ಮಿಕ ಇಲಾಖೆ ಆವರಣದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಕಾರ್ಮಿಕರು ತಮ್ಮ ಕನಿಷ್ಠ ವೇತನವನ್ನು ರು. 35,000/- ಕ್ಕೆ ಹೆಚ್ಚಳ ಮಾಡಬೇಕು ಎಂದು ಪ್ರತಿಭಟನೆಯನ್ನು ನಡೆಸಿದರು.** ★

# ಧಾರ್ಮಿಕ ಸ್ವಾತಂತ್ರ್ಯ ಹಕ್ಕು "ಸಂರಕ್ಷಣೆ"; ಮಸೂದೆಯಲ್ಲಿರುವುದೇನು?

ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿದೇಯಕ 2000 21ವನ್ನು ಬೆಳಗಾವಿಯಲ್ಲಿ ನಡೆದ ಕರ್ನಾಟಕ ವಿಧಾನಸಭೆಯ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಯಿತು.

ಅದು ಅನೇಕ ಪ್ರತಿಭಟನೆಗಳ ನಡುವೆಯೂ ಪಾಸಾಯಿತು. ಆದರೆ ಅದು ಕಾನೂನು ಆಗಬೇಕಾದರೆ ವಿಧಾನ ಪರಿಷತ್ತಿನಲ್ಲಿ ಅದು ಪಾಸ್ ಮಾಡಬೇಕಾಗುತ್ತದೆ. ಆದರೆ ಆಳುವ ಪಕ್ಷಕ್ಕೆ ಅಲ್ಲಿ ಸಂಖ್ಯಾಬಲ ಇಲ್ಲದಿರುವುದರಿಂದ ಅದನ್ನು ಹಾಗೆ ಬಿಡಲಾಗಿದೆ. ಸದರಿ ಮಸೂದೆಯು ದೇಶಾದ್ಯಂತ ಅನೇಕ ಬಿಜೆಪಿ ಆಳ್ವಿಕೆಯ ಸರ್ಕಾರಗಳು ಮಂಡಿಸಿರುವ ಈ ರೀತಿಯ ಕಾನೂನುಗಳ ಸರಮಾಲೆಗಳಲ್ಲಿ ಇದೂ ಸಹ ಒಂದಾಗಿದೆ. ಎಲ್ಲದರ ಉದ್ದೇಶ ಎಲ್ಲಾ ಒಂದೇ ಕರ್ನಾಟಕ ಸರ್ಕಾರದ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಇದೆ ರೀತಿಯ ಕಾನೂನು ಚಲಾವಣೆಯಲ್ಲಿದೆ . ಇದರ ವಿರುದ್ಧ ಅನೇಕ ಕೋರ್ಟ್ ಗಳಲ್ಲಿ ವಿಚಾರಣೆ ಹಂತದಲ್ಲಿವೆ. ಮಸೂದೆಯ ವಿರುದ್ಧ ಕರ್ನಾಟಕದ ವಿರೋಧಪಕ್ಷಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಅನೇಕ ರೀತಿಗಳಲ್ಲಿ ಪ್ರತಿಭಟಿಸಿದ್ದಾರೆ. ಆದಾಗ್ಯೂ ಸರ್ಕಾರ ಹಠ ಹಿಡಿದು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಕರ್ನಾಟಕದ ಮಸೂದೆಯನ್ನು ವಿಮರ್ಶಿಸಿದಾಗ ಅನೇಕ ವಿರೋಧಾಭಾಸಗಳು ಮತ್ತು ಸಂವಿಧಾನ ವಿರೋಧಿ ನಿಲುವುಗಳು ಮುಖಕ್ಕೆ ರಾಚುತ್ತವೆ. ಮಸೂದೆ ಶಿರೋನಾಮೆಯೇ ವೈರುಧ್ಯತೆ ಯಿಂದ ಕೂಡಿದೆ ಮತ್ತು ಸಂವಿಧಾನ ವಿರೋಧಿಯಾಗಿದೆ. ಹೆಸರಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹಕ್ಕುಗಳನ್ನೂ ಇಲ್ಲವಾಗಿಸುವ ಉದ್ದೇಶ ಸ್ಪಷ್ಟವಾಗಿದೆ ಮತ್ತು ಒಟ್ಟಾರೆ ಮತಾಂತರವನ್ನು ಅಪರಾಧಿಕರಣ ಗೊಳಿಸುವ ಉದ್ದೇಶ ಕಾನಸಿಗುತ್ತದೆ.

ಅಲ್ಲಿ ಕಂಡುಬರುವ ಒಂದು ಪದ "allurement" ಎಂಬುದೇ ಸಮಸ್ಯಾತ್ಮಕ ಪದ, ಕನ್ನಡದಲ್ಲಿ ಇದನ್ನು "ಆಮಿಷಾ" ಕಾನೂನುಬಾಹಿರ ಎಂದು ಬಳಸಬಹುದು, ಕರೆಯಬಹುದು. ಆಮಿಷ ಎಂದರೆ ಅದು ನಗದು ರೂಪದಲ್ಲಿ ವಸ್ತುವಿನ ರೂಪದಲ್ಲಿ, ಶಾಲೆ, ಆಸ್ಪತ್ರೆಗಳನ್ನು ಮತ ಧರ್ಮಪ್ರಚಾರ ಉದ್ದೇಶಕ್ಕಾಗಿ ಸ್ಥಾಪಿಸಿರುವ ದಾಗಿ ಹೇಳಬಹುದು. ಹೀಗಾಗಿ ಈ ಮೂಲಕ ಅವುಗಳನ್ನು ಕಾನೂನುಬಾಹಿರ ಗೊಳಿಸಬಹುದು ಮತ್ತು ಅವುಗಳಿಗೆ ಮರೆಯಬಹುದು ಅಭಿಷೇಕ ಎಂಬ ಪದದ ನೆರಳಿನಲ್ಲಿ ಎಲ್ಲಾ ಬಲಪಂಥೀಯ ಧಾಳಿಯನ್ನು ನಡೆಸಬಹುದು, ಸ್ವಯಂಘೋಷಿತ ಗುಂಪುಗಳ ದಾಳಿಗಳನ್ನು ಬಹುದು. ಇನ್ನೊಂದು ಪ್ರಕರಣದಲ್ಲಿ ಸಾಕ್ಷರತೆಯನ್ನು ಸಾಕ್ಷ್ಯದ ಹೊರೆಯನ್ನು ಒದಗಿಸುವುದು ಆರೋಪಿಯ ಜವಾಬ್ದಾರಿಯಾಗಿರುತ್ತದೆ. ಇದೇ ರೀತಿಯ ಅಂಶವನ್ನು UAPA ಕಾನೂನಿನಲ್ಲೂ ಕಾಣಬಹುದು. ಇದರ ಜೊತೆಗೆ ಮತಾಂತರ ಆದವರು ತಾವು ತಪ್ಪಿತಸ್ಥರಲ್ಲಾ ಎಂದು ತಾವೇ ಸಾಬೀತು ಪಡಿಸಬೇಕು. ಇದು ಭಾರತದ ನ್ಯಾಯ ಸಂಹಿತೆಯ ಮೂಲ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

ಈ ಮಸೂದೆಯಲ್ಲಿ ಇನ್ನೊಂದು ಗಮನಾರ್ಹವಾದ ಅಂಶ ಇದೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳು ಬುದ್ಧಿಮಾಂದ್ಯರು, ಅಪ್ರಾಪ್ತರು ಮತ್ತು ಮಹಿಳೆಯರನ್ನು ಮತಾಂತರ ಮಾಡಿದರೆ ಅವರಿಗೆ 3 ರಿಂದ 10 ವರ್ಷ ಜೈಲು, ಮತ್ತು 50 ಸಾವಿರ ರೂಪಾಯಿ ದಂಡಕ್ಕೆ ಅವಕಾಶವಿದೆ ಮತ್ತು ಸಾಮೂಹಿಕ ಮತಾಂತರ ಮಾಡಿದರೆ ಮೂರರಿಂದ ಹತ್ತು ವರ್ಷ




**ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡನೆ ಮಾಡುವ ವಿರುದ್ಧ ಬೆಂಗಳೂರಿನಲ್ಲಿ ನಡೆದ ಹೋರಾಟ**

ಜೈಲು ಮತ್ತು ರೂ 1,00,000 ವರೆಗೆ ಜುಲ್ಮಾನೆ ವಿಧಿಸಬಹುದು. ಇದರ ಉದ್ದೇಶ ಯಾವುದೇ ಕಾರಣಕ್ಕೂ ಯಾವುದೇ ಮತಾಂತರ ಆಗದೆ ಇರಲಿ ಎಂದು ಉದ್ದೇಶ ಇದೆ. ಜಾತಿ ವ್ಯವಸ್ಥೆ ಹೀಗೇ ಇರಲಿ ಎಂಬ ರಣ ನೀತಿ ಇದೆ. ಸಾಮಾಜಿಕ ಸಂಚಲನೆಯನ್ನು ಬಯಸುವ ಸಮುದಾಯಗಳನ್ನು ಈ ಮೂಲಕ ಅವಮಾನ ಮಾಡಲಾಗಿದೆ.

ಇನ್ನೊಂದು ಅಂಶವೆಂದರೆ ಮತಾಂತರಗಳ ಬಗ್ಗೆ ಯಾರು ದೂರು ಕೊಡಬಹುದು ಎಂಬುದಾಗಿದೆ. ಅವರೆಂದರೆ ಪಾಲಕರು ಸಹೋದರ ಮತ್ತು ಸಹೋದರಿಯರು ಸಹೋದ್ಯೋಗಿಗಳು ಮತ್ತು ವಿಜಿಲಾಂಟ್ ಗಳು ಆಗಿದ್ದಾರೆ ಈ ಮಸೂದೆಯ ಮೂಲಕ ಯಾವುದೇ ವ್ಯಕ್ತಿಯು ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಕಸಿದುಕೊಳ್ಳುವುದು ಆಗಿದೆ. ಸಂವಿಧಾನ ವಿರೋಧಿ ದೇಶದ ಪ್ರಜೆಗಳ ನಂಬಿಕೆಯ ಹಕ್ಕನ್ನು ನಿರಾಕರಿಸುವುದು ಮತ್ತು ಪ್ರೀತಿಸುವ ಹಕ್ಕನ್ನು ಸಹ ಕಸಿದುಕೊಳ್ಳುವುದು ಬಿಜೇಪಿಯ ಗುರಿಯಾಗಿದೆ. ಹೀಗಾಗಿ ಮಸೂದೆಯನ್ನು ಯಾರು ವಿರೋಧಿಸಬೇಕು ಧಾರ್ಮಿಕ ಸ್ವಾತಂತ್ರ್ಯ, ಪ್ರೀತಿಸುವ ಹಕ್ಕುಗಳನ್ನು ಎತ್ತಿಹಿಡಿಯುವ ಎಲ್ಲರೂ ಇದನ್ನು ವಿರೋಧಿಸಬೇಕು. ಇದಕ್ಕಾಗಿ ರಾಜ್ಯಾದ್ಯಂತ ಅತ್ಯಂತ ವಿಶಾಲ ಸಂಘಟಿತ ಹೋರಾಟ ಬೇಕಾಗಿದೆ.

★ ರಘುಪತಿ ಸಿದ್ದಯ್ಯ

# ಖುರ್ರಮ್ ಪರ್ವೇಜ್ ಅವರನ್ನು ಬಿಡುಗಡೆ ಮಾಡಬೇಕು

ಜಮ್ಮು-ಕಶ್ಮೀರ ಕೋಅಲಿಷನ್ ಆಫ್ ಸಿವಿಲ್ ಸೊಸೈಟಿ (ಜೆಕೆಸಿಸಿಎಸ್) ಎಂಬ ಸಂಸ್ಥೆಯೊಂದಿಗೆ ಮಾನವಹಕ್ಕುಗಳ ಕೆಲಸದಲ್ಲಿ ತೊಡಗಿದ್ದ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರಾದ ಖುರ್ರಮ್ ಪರ್ವೇಜ್ ಅವರನ್ನು ನವೆಂಬರ್ 22ರಂದು ನ್ಯಾಷನಲ್ ಇನ್ವೆಸ್ಟಿಗೇಷನ್ ಏಜನ್ಸಿ (ಎನ್‌ಐಎ) ಅವರು ಬಂಧಿಸಿದ್ದಾರೆ. ಪರ್ವೇಜ್ ಅವರ ವಿರುದ್ಧ ಯುಎಪಿಎ ಕರಾಳ ಶಾಸನದ ಪ್ರಕರಣವನ್ನು ದಾಖಲಿಸಲಾಗಿದ್ದು, ಅವರ ಬಂಧನಕ್ಕೂ ಮುನ್ನ ಅವರ ಮನೆ ಮತ್ತು ಜೆಕೆಸಿಸಿಎಸ್ ಕಚೇರಿಗೆ ದಾಳಿ ಮಾಡಿದ್ದರು ಎನ್‌ಐಎ ಅಧಿಕಾರಿಗಳು. ಜೆಕೆಸಿಸಿಎಸ್ ಮತ್ತು ಪರ್ವೇಜ್ ಅವರು ಹಲವಾರು ದಶಕಗಳಿಂದ ಕಾಶ್ಮೀರದ ನಾಗರೀಕರ ಮೇಲೆ ರಕ್ಷಣಾ ಪಡೆಗಳು ಮತ್ತು ಉಗ್ರವಾದಿಗಳು ಸತತವಾಗಿ ನಡೆಸುತ್ತಿದ್ದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ದಾಖಲಿಸುತ್ತಿದ್ದರು.

ಜಮ್ಮು ಕಾಶ್ಮೀರದಲ್ಲಿ ನಡೆಯುತ್ತಿರುವ ಹಕ್ಕುಗಳ ಉಲ್ಲಂಘನೆಗಳ ವಿರುದ್ಧ ಮಾತನಾಡುವ ಎಲ್ಲಾ ವ್ಯಕ್ತಿಗಳನ್ನು ಉದ್ದೇಶಪೂರ್ವಕವಾಗಿ ಮೋದಿ ಸರ್ಕಾರವು ದಮನಿಸುತ್ತಿದೆ. ಜಿನೀವಾದಲ್ಲಿರುವ ವಿಶ್ವಸಂಸ್ಥೆ ಮಾನವ ಹಕ್ಕುಗಳ ಪರಿಷತ್ತಿನಲ್ಲಿ ಭಾಗವಹಿಸದಂತೆ ಪರ್ವೇಜ್ ಅವರನ್ನು 2016 ಇಸವಿಯಲ್ಲಿ ಪಬ್ಲಿಕ್ ಸೇಫ್ಟಿ ಆಕ್ಟ್ (ಪಿ.ಎಸ್.ಎ) ಅಡಿಯಲ್ಲಿ ಬಂಧಿಸಲಾಗಿತ್ತು. ಆಗ ಅವರು 76 ದಿನಗಳ ಕಾಲ ಜೈಲಿನಲ್ಲಿದ್ದರು.

ಕಶ್ಮೀರ ಮತ್ತು ಏಷ್ಯಾ ಖಂಡದಲ್ಲಿ ನಡೆಯುವ ಮನುಷ್ಯರ ಒತ್ತಾಯಪೂರ್ವಕ ಕಾಣೆಯಾಗುವಿಕೆಯ ಕುರಿತು ಕೆಲಸ ಮಾಡುತ್ತಿದ್ದರು. ಹಾಗಾಗಿ ಅವರು ಅಂತರರಾಷ್ಟ್ರೀಯ ಮಟ್ಟದ ಮಾನವ ಹಕ್ಕುಗಳ ಸಂಘಟನೆಯಾದ ಏಶಿಯನ್ ಫೆಡರೇಶನ್ ಎಗೈನ್ಸ್ಟ್ ಇನ್ವೋಲೆಂಟರಿ ಡಿಸ್‌ಅಪಿಯರೆನ್ಸ್ (AFAD) ಅಧ್ಯಕ್ಷರಾಗಿದ್ದರು. ಭಯೋತ್ಪಾದಕರ ಮತ್ತು ರಕ್ಷಣಾ ಪಡೆಗಳ ಮಧ್ಯೆಯಲ್ಲಿ ಹಲವಾರು ಸಾಮಾನ್ಯ ಜನರು ಸಿಕ್ಕಿಬಿದ್ದು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಅಲ್ತಾಫ್ ಅಹ್ಮದ್ ಭಟ್ ಮತ್ತು ಮುದಸ್ಸಿರ್ ಗುಲ್ ಅವರ ಕುಟುಂಬಸ್ಥರು ಬಹಿರಂಗವಾಗಿ ಮಾತನಾಡುತ್ತಾ, ರಕ್ಷಣಾ ಪಡೆಗಳು ಇವರಿಬ್ಬರನ್ನು 'ಹ್ಯೂಮನ್ ಶೀಲ್ಡ್' ಆಗಿ ಉಪಯೋಗಿಸಿದ್ದರು ತದನಂತರ ಇವರಿಬ್ಬರು ಭಯೋತ್ಪಾದಕರು ಎಂದು ಹಣೆಪಟ್ಟಿಯನ್ನು ಕಟ್ಟಿದ್ದರು ಎಂದು ಹೇಳಿದರು. ಇದರ ವಿರುದ್ಧ ಶ್ರೀನಗರದಲ್ಲಿ ಬೃಹತ್ ಮಟ್ಟದ ಪ್ರತಿಭಟನೆಗಳು ನಡೆದಿದ್ದವು.



ಖುರ್ರಮ್ ಪರ್ವೇಜ್

72ಗಳ ಕಾಲ ಸತತವಾದ ಹೋರಾಟದ ನಂತರ ರಕ್ಷಣಾ ಪಡೆಗಳು ಆತುರದಲ್ಲಿ ಹೂತುಹಾಕಿದ್ದ ಭಟ್ ಮತ್ತು ಗುಲ್ ಅವರ ಮೃತದೇಹಗಳನ್ನು ಹೊರತೆಗೆದು ಕುಟುಂಬಸ್ಥರಿಗೆ ಅಂತ್ಯಕ್ರಿಯೆಗಾಗಿ ಹಿಂದಿರುಗಿಸಿದರು. ಈ ಘಟನೆಯ ನಂತರದಲ್ಲಿ ಪರ್ವೇಜ್ ಅವರ ಮನೆ ಮತ್ತು ಕಚೇರಿಯ ಮೇಲೆ ದಾಳಿ ನಡೆಸಿ, ಅವರನ್ನು ಬಂಧಿಸಲಾಗಿರುತ್ತದೆ.

ಯುಎಪಿಎ ಕಾಯ್ದೆ ಅಡಿಯಲ್ಲಿ ಬಂಧಿಸಿದವರು ಜಾಮೀನು ಸಿಗದೇ ಹಲವಾರು ವರ್ಷಗಳ ಕಾಲ ತಮ್ಮ ನಿರ್ದೋಷತೆಯನ್ನು ಸಾಧಿಸದೆ ಬಂಧನದಲ್ಲೇ ಉಪಳಿಯುತ್ತಾರೆ. ಸಾಮಾಜಿಕ ಕಾರ್ಯಕರ್ತರನ್ನು ನಿಶ್ಯಬ್ಧಗೊಳಿಸಲು ಮೋದಿ ಸರ್ಕಾರವು ಯುwಪಿಎ ಅನ್ನು ತನ್ನ ಅಸ್ತ್ರವಾಗಿ ಉಪಯೋಗಿಸಿಕೊಳ್ಳುತ್ತಿದೆ. ಸುಧಾ ಭರದ್ವಾಜ, ಗೌತಮ್ ನವಲಖ, ಜಿ.ಎನ್. ಸಾಯಿಬಾಬ ಮತ್ತು ಇತರರನ್ನು ಮಾವೋವಾದಿಗಳಾಗಿ ಹಣೆಪಟ್ಟಿ ಹಚ್ಚಿ ಅವರು ಜೈಲಿನಲ್ಲಿ ಇರುವಂತೆ ಷಡ್ಯಂತರವನ್ನು ರಚಿಸಲಾಗಿದೆ. ಸ್ಟಾನ್ ಸ್ವಾಮಿ ಅವರನ್ನೂ ಯುಎಪಿಎ ಕಾಯ್ದೆಯಡಿಯಲ್ಲಿ ಬಂಧಿಸಿದ್ದು, ಅವರು ಬಂಧನದಲ್ಲೇ ಮೃತಪಟ್ಟರು. ಈಗಲೂ ಸಹ ಖುರ್ರಮ್ ಪರ್ವೇಜ್ ಅವರು ಬಂಧನದಲ್ಲಿದ್ದಾರೆ. ಅವರನ್ನು ಈ ಕೂಡಲೇ ಬಿಡುಗಡೆ ಮಾಡಬೇಕು. ನಮ್ಮ ದೇಶದ ಸಾಮಾಜಿಕ ಕಾರ್ಯಕರ್ತರ ವಿರುದ್ಧ ಯುಎಪಿಎ ಕಾನೂನನ್ನು ಬಳಸುವುದನ್ನು ನಿಲ್ಲಿಸಬೇಕು. ★

# ಕರ್ನಾಟಕ ಪ್ರಗತಿಪರ ಪರಿಸರ ರಕ್ಷಣಾ ಹೋರಾಟ ಸಮಿತಿ ರಚನೆ

ಗಂಗಾವತಿ ನಗರದಲ್ಲಿ ಸರಿಯಾದ ಸ್ವಚ್ಛತೆ ಇರದ ಕಾರಣ ಜನರು ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿದ್ದಾರೆ ಲಕ್ಷಾಂತರ ರೂಪಾಯಿ ಸಾಲ ಮಾಡಿ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿದ್ದಾರೆ ಜನರನ್ನು ರಕ್ಷಿಸಲು ನಗರವನ್ನು ಸ್ವಚ್ಛವಾಗಿಡುವುದೊಂದೆ ಮಾರ್ಗವಾಗಿದೆ ಹಾಗಾಗಿ ನಾವು ಈ ಪರಿಸರ ರಕ್ಷಣಾ ಸಮಿತಿಯನ್ನು ಕಟ್ಟಿಕೊಂಡು ಒಂದು ಗಂಗಾವತಿ ನಗರವನ್ನು ಸ್ವಚ್ಛವಾಗಿಡಲು ಜನರನ್ನು ಜಾಗೃತ ಗೊಳಿಸಲು ಒಂದು ಜಾಗೃತಿ ಜಾತಾವನ್ನು ಹಮ್ಮಿಕೊಳ್ಳಲಾಗಿತ್ತು. ಜಾತದ ಉದ್ದಕ್ಕೂ ಪರಿಸರ ರಕ್ಷಣೆ ಬಗ್ಗೆ ಘೋಷಣೆಗಳನ್ನು ಕೂಗಲಾಯಿತು. ನಗರವನ್ನು ಸ್ವಚ್ಛಗೊಳಿಸಬೇಕಾದರೆ ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸಬೇಕೆಂದು ಕರಪತ್ರಗಳನ್ನು ಹಂಚಲಾಯಿತು - ಪ್ಲಾಸ್ಟಿಕ್ ನಿಯಂತ್ರಿಸುವ ಕುರಿತು, ಕಸದ ವಿಲೇವಾರಿ ಸಮಸ್ಯೆ, ಚರಂಡಿಗಳ ಸಮಸ್ಯೆ, ಬೀದಿನಾಯಿಗಳ ಸಮಸ್ಯೆ, ಮುಕ್ತ ಬಹಿರ್ದೆಸೆ ಸಮಸ್ಯೆ, ಮಹಿಳೆಯರ ಶೌಚಾಲಯಗಳು ಇಲ್ಲದಿರುವ ಸಮಸ್ಯೆ, ಖಾಲಿ ನಿವೇಶನಗಳಲ್ಲಿರುವ ತಿಪ್ಪೆಗುಂಡಿಗಳ ಸಮಸ್ಯೆ, ಸೊಳ್ಳೆ ನಿಯಂತ್ರಣದ ಪಾಗಿಂಗ್ ಸಮಸ್ಯೆ. ಎಲ್ಲ ಸಮಸ್ಯೆಗಳ ಬಗ್ಗೆ ಗಂಗಾವತಿ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಇದರ ಕುರಿತು ಪೌರಕಾರ್ಮಿಕರ ಕೊಡುಗೆ ಮತ್ತು ಜನರ ಸ್ಪಂದನೆ ಬಗ್ಗೆ ಮಾತನಾಡಲಾಯಿತು.

★ ಸಣ್ಣಹನುಮಂತ ಹುಲಿಹೈದರ್

# AFSPA ರದ್ದುಗೊಳಿಸಬೇಕು!

ನಾಗಾಲ್ಯಾಂಡ್ ರಾಜ್ಯದ ಓಟಿಂಗ್ ಹಳ್ಳಿಯಲ್ಲಿ ಹಲವಾರು ಕಲ್ಲಿದ್ದಲು ಗಣಿ ಕಾರ್ಮಿಕರನ್ನು ವಿಶೇಷ ರಕ್ಷಣಾ ಪಡೆಗಳು ಕಗ್ಗೊಲೆ ಮಾಡಿದ್ದು, ಇಂತಹ ಹೀನಾಯ ಅಪರಾಧವನ್ನು ಮರೆಮಾಚಲು ಅದನ್ನು ಫೇಕ್ ಎನ್ಕೌಂಟರ್ ಎಂದು ತೋರುತ್ತಿದ್ದಾರೆ. ಕೇಂದ್ರ ಗೃಹ ಮಂತ್ರಿ ಅಮಿತ್ ಷಾ ಮತ್ತು ಆರ್ಮಿ ಅಧಿಕಾರಿಗಳು ಇದಕ್ಕೆ ಸಮಜಾಯಿಷಿ ನೀಡುತ್ತಾ ಈ ಘಟನೆಯು ಒಂದು "ಸಣ್ಣ ತಪ್ಪು" ಎಂದು ಕರೆದಿದ್ದಾರೆ. ಆದರೆ ಈಶಾನ್ಯ ರಾಜ್ಯಗಳಲ್ಲಿರುವ ಬಿಜೆಪಿ ಸದಸ್ಯರಿಗೆ ಮತ್ತು ಪೋಷಕರಿಗೂ ಇಂತಹ ವಿವರಣೆಯು ಮನದಟ್ಟಿರುವುದಿಲ್ಲ.

ದಂಗೆಕೋರರು ಸಾಗುತ್ತಿದ್ದರು ಎಂಬ "ನಂಬತಕ್ಕ ಗುಪ್ತಮಾಹಿತಿ" ಇದ್ದ ಕಾರಣ ರಕ್ಷಣಾ ಪಡೆಗಳು ನಾಗರೀಕರು ಹೋಗುತ್ತಿದ್ದ ಟ್ರಕ್ ಮೇಲೆ (ಇದರಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರು ಕೆಲಸದಿಂದ ಮನೆಗಳಿಗೆ ಹಿಂತಿರುಗುತ್ತಿದ್ದರು) ಗನ್ ದಾಳಿ ನಡೆಸಿದ್ದರು ಎಂದು ಹೇಳುತ್ತಾರೆ. ಆದರೆ ಈ ಸಮಜಾಯಿಷಿಯನ್ನು ನಂಬುವುದು ಅಸಾಧ್ಯವಾಗಿದೆ.

ಮೊದಲನೆಯದಾಗಿ, ಈ ಕದನವು ಮುಂಜಾನೆ ಸಮಯದಲ್ಲಿ ಗಾಡಿ ದಟ್ಟಣೆಯಿರುವ ರಸ್ತೆಯಲ್ಲಿ ನಡೆದಿರುತ್ತದೆ. ಹಾಗೆಯೆ, ರಕ್ಷಣಾ ಪಡೆಗಳು ಸ್ಥಳೀಯ ಪೊಲೀಸರಿಗೆ ಯಾವುದೇ ಮಾಹಿತಿ ನೀಡದೆ ಮತ್ತು ಅಲ್ಲಿರುವ ಜನರಿಗೆ ಯಾವುದೇ ಮುಂಚೂಣಿ ಘೋಷಣೆ ಮಾಡದೆ ಸರಾಸರಿ ಗನ್ ದಾಳಿಯನ್ನು ತಮ್ಮದೇ ನೀತಿಸಂಹಿತೆಯನ್ನು ಉಲ್ಲಂಘಿಸಿ ನಡೆಸಿರುತ್ತಾರೆ. ಯಾವುದೇ ಖುಮ್ಮಕ್ಕು ಇಲ್ಲದೆ, ಯಾವುದೇ ಎಚ್ಚರಿಕೆ ನೀಡದೆ, ಮತ್ತು ಯಾವ ಟ್ರಕ್ಕಿನಲ್ಲಿ ಭಯೋತ್ಪಾದಕರು ಇದ್ದಾರೆ ಎಂದು ಗುರುತಿಸದೆ, ರಕ್ಷಣಾ ಪಡೆಯು ದಾಳಿ ನಡೆಸಿರುತ್ತದೆ. ಆ ಟ್ರಕ್ಕಿನಲ್ಲಿ ಭಯೋತ್ಪಾದಕರು ಇದ್ದರೂ ಸಹ ಈ ಪ್ರಕ್ರಿಯೆಯನ್ನು ಅಳವಡಿಸದೇ ದಾಳಿ ನಡೆಸಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿರುತ್ತದೆ. ಸ್ಥಳೀಯ ನಾಗರೀಕರು ಘಟನೆಯ ಕುರಿತು ವಿಚಾರಿಸಲು ಸ್ಥಳಕ್ಕೆ ಹೋದಾಗ, ರಕ್ಷಣಾ ಪಡೆಗಳು "ಎನ್ಕೌಂಟರ್" ಮಾಡುವ ಮಧ್ಯೆಯಲ್ಲಿದ್ದರು ಎಂದು ನೋಡಿದರು. ಇದರಿಂದ ರೊಚ್ಚಿಗೆದ್ದ ಜನರು ಸ್ಥಳೀಯ ಆರ್ಮಿ ಕೇಂದ್ರಕಚೇರಿ ಹೊರಗೆ ಪ್ರತಿಭಟನೆಯನ್ನು ನಡೆಸಿದರು. ಆಗು ಸಹ ರಕ್ಷಣಾ ಪಡೆಗಳು ನಾಗರೀಕರ ಮೇಲೆ ಗೊತ್ತುಗುರಿಯಿಲ್ಲದೆ ಗುಂಡುಹಾರಿಸಿದರು. ಈ ಘಟನೆಯಲ್ಲಿ ಏಳು ಜನರು ತಮ್ಮ ಪ್ರಾಣ ಕಳೆದುಕೊಂಡರು. ತಕ್ಷಣವೇ ರಕ್ಷಣಾ ಪಡೆಗಳು ಅಲ್ಲಿಂದ ಪರಾರಿಯಾದರು. ದಾರಿಯಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರ ಮನೆಗಳ ಮೇಲೂ ಗುಂಡು ಹಾರಿಸಿದರು. ಒಟ್ಟಿನಲ್ಲಿ 15 ನಾಗರೀಕರನ್ನು ಕಗ್ಗೊಲೆ ಮಾಡಿದ್ದಾರೆ. ಹಲವಾರು ಜನರು ಗಾಯಗೊಂಡಿದ್ದಾರೆ.

ಇದು ದಾರಿತಪ್ಪಿದ ಒಂದು ಘಟನೆಯಲ್ಲ. ಈಶಾನ್ಯ ರಾಜ್ಯಗಳಲ್ಲಿ, ಕಾಶ್ಮೀರದಲ್ಲಿ, ಬಸ್ತರ್ ಮತ್ತು ಇತರೆ ವಿವಾದಿತ ಪ್ರದೇಶಗಳಲ್ಲಿ ನಾಗರೀಕರ ಕಗ್ಗೊಲೆಗಳನ್ನು ಎನ್ಕೌಂಟರ್ ಆಗಿ ಪರಿವರ್ತಿಸುವುದು ಸಾಮಾನ್ಯವಾಗಿದೆ. ಕ್ವಿಟ್ ಇಂಡಿಯಾ ಚಳುವಳಿಯನ್ನು ಮುರಿಯಲು ಬ್ರಿಟಿಷರು ಆರ್ಮ್ಡ್ ಫೋರ್ಸಸ್ ಸ್ಪೆಷಲ್ ಪವರ್ಸ್ ಸುಗ್ರೀವಾಜ್ಞೆಯನ್ನು 1942ರಲ್ಲಿ ಹೊರಡಿಸಿದರು. ಇದರ ನಂತರದಲ್ಲಿ ಬಂದದ್ದೇ ಆರ್ಮ್ಡ್ ಫೋರ್ಸಸ್ ಸ್ಪೆಷಲ್ ಪವರ್ಸ್ ಆಕ್ಟ್ (AFSPA). ವಸಾಹತುಶಾಹಿ ಸಮಯದ ಈ ಕಾನೂನು ಇಂದಿಗೂ ಈಶಾನ್ಯೆ ರಾಜ್ಯಗಳಲ್ಲಿ ಜಾರಿಯಲ್ಲಿರುವುದು ವಿಷಾಧನೀಯ. ಕೊಲೆ, ಹಿಂಸಾಚಾರ ಮತ್ತು ಅತ್ಯಾಚಾರಗಳಂತಹ ಅಪರಾಧಗಳನ್ನು ಮಾಡಿದರೂ ರಕ್ಷಣಾ ಪಡೆಗಳ ಮೇಲೆ ಅಪರಾಧಿಕ ಪ್ರಕರಣಗಳನ್ನು ದಾಖಲಿಸುವುದರಿಂದ ರಕ್ಷಣೆ ನೀಡುತ್ತದೆ. ಓಟಿಂಗ್ ಹತ್ಯಾಕಾಂಡದಲ್ಲಿ ನಾಗಾಲ್ಯಾಂಡ್ ಪೊಲೀಸರು ವಿಶೇಷ ಪಡೆಗಳ ವಿರುದ್ಧ FIR ದಾಖಲಿಸಿದ್ದರೂ ಸಹ ಅವರು ಪಡೆಗಳ ವಿರುದ್ಧ ಕ್ರಮ ಜರುಗಿಸಲು ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರವು ಯಾವತ್ತೂ ಸಹ ಅನುಮತಿ ನೀಡಿರುವುದಿಲ್ಲ. 2004 ಇಸವಿಯಲ್ಲಿ ಥಾಂಗಜಾಮ್ ಮನೋರಮಾ ಅವರ ಗ್ಯಾಂಗ್-ರೇಪ್ ಮತ್ತು ಕೊಲೆ ಪ್ರಕರಣದಲ್ಲಿ ಅಸ್ಸಾಂ ರೈಫಲ್ ಸಿಬ್ಬಂಧಿಯನ್ನು ದೋಷಾರೋಪಣೆಗಳನ್ನು ಸಾಬೀತುಪಡಿಸಿದ್ದಲು AFSPA ಅವರಿಗೆ ರಕ್ಷಣೆ ನೀಡುವ ಕಾರಣ ಅವರನ್ನು ಶಿಕ್ಷಿಸಲಾಗಿರುವುದಿಲ್ಲ.

ಈಶಾನ್ಯೆ ರಾಜ್ಯಗಳ ನಾಗರೀಕರ ವಿರುದ್ಧ ರಕ್ಷಣಾ ಪಡೆಗಳು ಅತ್ಯಾಚಾರಗಳನ್ನು ಎಸಗಿದ್ದು, ಅವರು AFSPA ನೆರಳಿನಲ್ಲಿ ರಕ್ಷಣೆಯನ್ನು ಪಡೆದುಕೊಂಡಿದ್ದಾರೆ. ಈ ಕಾರಣ ಜನರು AFSPA ಅನ್ನು ರದ್ದುಗೊಳಿಸಲು ಸತತವಾಗಿ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದಾರೆ. ಮಣಿಪುರ ರಾಜ್ಯದ ಮಹಿಳೆಯರು ಅಸ್ಸಾಮ್ ರೈಫಲ್ಸ್ ಕೇಂದ್ರ ಕಚೇರಿಯ ಹೊರಗೆ ಬೆತ್ತಲೆ ನಿಂತು "ಇಂಡಿಯನ್ ಆರ್ಮಿ ರೇಪ್ ಅಸ್" ಎಂದು ಬರೆದ ಬ್ಯಾನರ್ ಹಿಡಿದಿದ್ದರು. ಈ ಹೋರಾಟವು AFSPA ದುರ್ಬಳಕೆಯ ಚಿತ್ರಣವನ್ನು ತೋರಿಸಿತ್ತು.

ಎಲ್ಲಾ ಬಣ್ಣಗಳ ಸರ್ಕಾರವು ರಚನೆಯಾದವು. ಆದರೆ ಒಂದು ಸರ್ಕಾರವೂ ಸಹ ಈಶಾನ್ಯೆ ರಾಜ್ಯಗಳಲ್ಲಿ, ಕಾಶ್ಮೀರದಲ್ಲಿ, ಬಸ್ತರ್ ಅಲ್ಲಿ, ಮತ್ತು ಇತರೆ ಪ್ರದೇಶಗಳಲ್ಲಿ ಜಾರಿಯಾಗಿರುವ AFSPA ರದ್ದುಗೊಳಿಸಲು ಮುಂದಾಗಲಿಲ್ಲ. ಮಣಿಪುರದಿಂದಲೇ ಸುಮಾರು ಎರಡು ದಶಕಗಳಿಂದ 1500 ಫೇಕ್ ಎನ್ಕೌಂಟರ್ ಪ್ರಕರಣಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆಯುತ್ತಲೇ ಬಂದಿದೆ. ಫೇಕ್ ಎನ್ಕೌಂಟರ್ ಮತ್ತು ರಕ್ಷಣಾ ಪಡೆಗಳು ಮಹಿಳೆಯರ ಮೇಲೆ ಎಸಗುವ ಅತ್ಯಾಚಾರಗಳ ವಿರುದ್ಧ ಯಾರೇ ದನಿ ಎತ್ತಿದರೂ, ಬಿಜೆಪಿಯು ಅವರುಗಳನ್ನು "ದೇಶದ್ರೋಹಿ"ಗಳೆಂದು ಕರೆದು ಅವರ ವಿರುದ್ಧ ದೇಶದ್ರೋಹದ ಪ್ರಕರಣವನ್ನು ದಾಖಲಿಸುತ್ತಾರೆ.

ಬಿಜೆಪಿಗೆ ಹತ್ತಿರವಾಗಿರುವ ನಾಗಾಲ್ಯಾಂಡ್ ಮತ್ತು ಮೇಘಾಲಯ ರಾಜ್ಯಗಳ ಮುಖ್ಯಮಂತ್ರಿಗಳು ಸಹ AFSPA ರದ್ದುಗೊಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದರೆ ಮೋನ್ ಜಿಲ್ಲೆಯ ಬಿಜೆಪಿ ಮುಖ್ಯಸ್ಥರೊಬ್ಬರು ಅವರ ಮತ್ತು ಇತರೆ ನಾಗರೀಕರ ಮೇಲೆ ರಕ್ಷಣಾ ಪಡೆಗಳು ಗುಂಡುಹಾರಿಸಿದ್ದಾರೆ ಮತ್ತು ಫೇಕ್ ಎನ್ಕೌಂಟರ್ ಮಾಡುವ ಪ್ರಯತ್ನ ನಡೆಸಿದ್ದಾರೆ ಎಂಬ ಸುಳ್ಳು ಆಪಾದನೆಯನ್ನು ಮಾಡುತ್ತಿದ್ದಾರೆ.

AFSPA ರದ್ದುಗೊಳಿಸುವಿಕೆ ಮಾತ್ರವಲ್ಲದೆ, ಈ ಕಪ್ಪು ಕಾಯ್ದೆಯನ್ನು ಜಾರಿಗೊಳಿಸಿರುವ ಪ್ರದೇಶಗಳಿಂದ ರಕ್ಷಣಾ ಪಡೆಗಳನ್ನು ಹಿಂಪಡೆಯುವುದು, ಹಿಂದಿನಿಂದ ನಡೆದಿರುವ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಮಿಲಿಟರಿ ಆಕ್ಷನ್ ಕುರಿತು ತನಿಖೆಗಳು ನಡೆಯಬೇಕು. ಈ ಪ್ರದೇಶದ ಜನರು ಸತತವಾದ ಅತ್ಯಾಚಾರ ಅನುಭವಿಸಿರುವ ಕಾರಣ ನ್ಯಾಯ ಒದಗಿಸಬೇಕು. ಅಪರಾಧಿಗಳು ರಕ್ಷಣಾ ಪಡೆಗಳಲ್ಲಿದ್ದರೂ, ಅವರುಗಳಿಗೆ ಶಿಕ್ಷೆ ಆಗಬೇಕು.

ಓಟಿಂಗ್ ಪ್ರಕರಣದಲ್ಲಿ ಮತ್ತು ರಕ್ಷಣಾ ಪಡೆಗಳ ಅಪರಾಧಗಳ ಕುರಿತು ನಡೆಸುವ ವಿಚಾರಣೆಯು ಬಹಿರಂಗ ನ್ಯಾಯಾಲಯದಲ್ಲಿ ನಡೆಯಬೇಕು. AFSPA ರದ್ದುಗೊಳಿಸುವ ತನಕ ದೇಶದ ನಾಗರೀಕರು ಪ್ರತಿರೋಧವನ್ನು ವ್ಯಕ್ತಪಡಿಸಬೇಕು. ★

# ಹಿಂದುತ್ವದ ನಾಯಕರುಗಳು ದ್ವೇಷದ ಭಾಷಣವನ್ನು ಅಸ್ತ್ರವನ್ನಾಗಿಸಿಕೊಂಡಿದ್ದಾರೆ

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಮಾಡಲಾದ ಯೋಜಿತವಲ್ಲದ ಲಾಕ್‌ಡೌನ್‌ಗಳು ಮತ್ತು ನೀತಿಗಳಿಂದ ಭಾರತವು ಹಿಂದೆಂದೂ ಕಂಡರಿಯದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇದರ ಒಟ್ಟಾರೆ ಪರಿಣಾಮದಿಂದಾಗಿ ಕೋಟಿಗಟ್ಟಲೆ ಜನರು ಕಡುಬಡತನಕ್ಕೆ ಜಾರಿದ್ದಾರೆ ಮತ್ತು ಬದುಕಲು ಹೆಣಗಾಡುತ್ತಿದ್ದಾರೆ - 84% ಕುಟುಂಬಗಳ ಆದಾಯವು 2021 ರಲ್ಲಿ ಕುಸಿದಿದೆ. ವಿಶ್ವಸಂಸ್ಥೆಯ ಪ್ರಕಾರ, ಜಾಗತಿಕವಾಗಿ ಸೃಷ್ಟಿಯಾಗಿರುವ ಹೊಸ ಬಡವರಲ್ಲಿ ಸುಮಾರು ಅರ್ಧದಷ್ಟು ಜನರು ಭಾರತದಲ್ಲಿದ್ದಾರೆ, ಇದೇ ಭಾರತದ ಸಾಧನೆ. ಅದೇ ಸಮಯದಲ್ಲಿ, ಶ್ರೀಮಂತರ ಮೇಲಿನ ತೆರಿಗೆಯನ್ನು ಮೋದಿ ಸರ್ಕಾರ ಕಡಿಮೆ ಮಾಡಿದ್ದರಿಂದ ಶ್ರೀಮಂತರು ಶ್ರೀಮಂತರಾಗಿದ್ದಾರೆ; ಸಂಪತ್ತು ತೆರಿಗೆಯನ್ನು ರದ್ದುಗೊಳಿಸಲಾಗಿದೆ ಮತ್ತು ಕಾರ್ಪೋರೇಟ್ ತೆರಿಗೆಗಳನ್ನು 39% ರಿಂದ 22% ಕ್ಕೆ ಇಳಿಸಲಾಗಿದೆ. ಭಾರತದಲ್ಲಿ ಬಿಲಿಯನೇರ್‌ಗಳ ಸಂಖ್ಯೆ 102 ರಿಂದ 142 ಕ್ಕೆ ಏರಿದೆ. ಚೀನಾ ಮತ್ತು ಯುಎಸ್‌ಎ ದೇಶಗಳ ನಂತರ ಭಾರತವು ಈಗ ಮೂರನೇ ಅತಿ ಹೆಚ್ಚು ಬಿಲಿಯನೇರ್‌ಗಳನ್ನು ಹೊಂದಿರುವ ರಾಷ್ಟ್ರವಾಗಿದೆ.

ಕಾರ್ಪೋರೇಟ್ ಪರವಾದ ಮತ್ತು ಕೋಮುವಾದದ ಪ್ರಮುಖ ಕಾರ್ಯಸೂಚಿಗಳನ್ನು ಹೊಂದಿರುವ ಬಿಜೆಪಿಯ ಫ್ಯಾಸಿಸ್ಟ್ ಆಳ್ವಿಕೆಯು ಈ ದುಸ್ಥಿತಿಗೆ ನೇರ ಪರಿಣಾಮವಾಗಿದೆ. ಸರ್ಕಾರವು ಕೃಷಿ ಕಾನೂನುಗಳು, ಕಾರ್ಮಿಕ ಸಂಹಿತೆಗಳು, ಕಾರ್ಮಿಕ ವರ್ಗದ ಮೇಲಿನ ತೆರಿಗೆಗಳನ್ನು ಹೆಚ್ಚಿಸುವುದು ಇತ್ಯಾದಿಗಳನ್ನು ಒಳಗೊಂಡಂತೆ ಹಲವಾರು ಜನವಿರೋಧಿ ಕಾನೂನುಗಳು ಮತ್ತು ನೀತಿಗಳನ್ನು ಜಾರಿ ಮಾಡುವುದಕ್ಕಾಗಿ ಸಾಂಕ್ರಾಮಿಕ ರೋಗ ಇದ್ದಂತಹ ಸಮಯವನ್ನು ದುರ್ಬಳಕೆ ಮಾಡಿಕೊಂಡಿದೆ. ಇದರ ವಿರುದ್ಧ ಧ್ವನಿಯಾಗಬಲ್ಲ ಸಾಮೂಹಿಕ ಪ್ರತಿರೋಧವನ್ನು ಕಡಿಮೆಗೊಳಿಸುವುದಕ್ಕಾಗಿ, ಸಮಾಜವನ್ನು ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಭಜಿಸುವುದಕ್ಕಾಗಿಯೇ ತಾನು ರೂಪಿಸಿರುವ ಹಿಂದುತ್ವ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿತ್ತು.

ಕರ್ನಾಟಕವು ದಕ್ಷಿಣ ಭಾರತಕ್ಕೆ ಹೆಬ್ಬಾಗಿಲು ಎಂದು ಸಂಘಪರಿವಾರ ಪದೇ ಪದೇ ಹೇಳುತ್ತಿದೆ. ಸಂಘ ಪರಿವಾರ ಹಲವು ದಶಕಗಳಿಂದ ಮಾಡಿಕೊಂಡು ಬರುತ್ತಿರುವ ಸಮಾಜ ಹೊಡೆಯುವ ಕೆಲಸಗಳು ಇಂದು ಕರ್ನಾಟಕದ ಹಲವಾರು ಭಾಗಗಳನ್ನು ಅದರಲ್ಲೂ ವಿಶೇಷವಾಗಿ ಕರಾವಳಿ ಪ್ರದೇಶವನ್ನು ಕೋಮು ಧ್ರುವೀಕರಣಗೊಳಿಸಿವೆ. ಮುಸ್ಲಿಂರನ್ನು ಹತ್ಯೆ ಮಾಡುವುದಕ್ಕಾಗಿ, ಪ್ರತ್ಯೇಕಿಸುವುದಕ್ಕಾಗಿ ಮತ್ತು ಬಹಿಷ್ಕರಿಸುವುದಕ್ಕಾಗಿ ಗೋಮಾಂಸ, ಅವರ ಸಾಮೂಹಿಕ ಪ್ರಾರ್ಥನೆ, ಆಜಾನ್, ತಲೆಗೆ ಹಾಕುವ ಟೋಪಿ, ಉರ್ದು ಭಾಷೆ ಮತ್ತು ಪ್ರಸ್ತುತದಲ್ಲಿ ಹಿಜಾಬ್ ವಿಚಾರಗಳನ್ನು ಹಿಂದೂ ಮೂಲಭೂತವಾದಿಗಳು ನೆಪಮಾಡಿಕೊಂಡಿದ್ದಾರೆ.

1960 ರ ದಶಕದಿಂದ ಕರ್ನಾಟಕವು ತನ್ನ ಆಡಳಿತ ವರ್ಗದ ಸ್ವರೂಪವನ್ನು ಬದಲಿಸಿದ ಕನಿಷ್ಠ ಮೂರು ಪ್ರಮುಖ ರಾಜಕೀಯ ಪಲ್ಲಟಗಳನ್ನು ಕಂಡಿದೆ ಎಂದು ರಾಜಕೀಯ ವಿಮರ್ಶಕರಾದ ಎ. ನಾರಾಯಣರವರು ವಾದಿಸುತ್ತಾರೆ. ಉನ್ಮಾದಿತ ಕೋಮುವಾದ ಮತ್ತು ಅಸಭ್ಯ ಕಾರ್ಪೋರೇಟ್ ತುಷ್ಟೀಕರಣದಿಂದ ನಿರೂಪಿಸಲ್ಪಟ್ಟಿರುವ ಕರ್ನಾಟಕದ ಪ್ರಸ್ತುತ ಪರಿಸ್ಥಿತಿಯು 4 ನೇ ಪ್ರಮುಖ ರಾಜಕೀಯ ಬದಲಾವಣೆಯನ್ನು ಪ್ರತಿನಿಧಿಸುತ್ತದೆ ಎಂಬ ಮತ್ತೊಂದು ಅಂಶವನ್ನು ಸೇರಿಸಬಹುದು.

ಸ್ವಾತಂತ್ರ್ಯದ ನಂತರದ ಮೂರು ದಶಕಗಳ ರಾಜಕೀಯ ಕಾಲವು ಕಾಂಗ್ರೆಸ್ ಏಕಸ್ವಾಮ್ಯದಿಂದ ಗುರುತಿಸಲ್ಪಟ್ಟಿದೆ, ಇದನ್ನು ಎರಡು ಪ್ರಬಲ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯತರು ನಿಯಂತ್ರಿಸಿದ್ದಾರೆ. ಕರ್ನಾಟಕದ ಮೊದಲ ಪ್ರಮುಖ ರಾಜಕೀಯ ಬದಲಾವಣೆಯು ದೇವರಾಜ್ ಅರಸ್ ಮತ್ತು ಅವರ ಅಹಿಂದ ಸೂತ್ರವು ಈ ಜಾತಿ ಪ್ರಾಬಲ್ಯಕ್ಕೆ ಸವಾಲಾಗಿತ್ತು, ಸಾಂಪ್ರದಾಯಿಕವಾಗಿ ಹಿಂದುಳಿದ ಸಾಮಾಜಿಕ ಗುಂಪುಗಳ ಸಾಮಾಜಿಕ ಒಕ್ಕೂಟವು ಅವರನ್ನು 1972 ರಲ್ಲಿ ಅಧಿಕಾರಕ್ಕೆ ತಂದಿತು. ಈ ಪ್ರಬಲ ಜಾತಿಗಳು ಮತ್ತು ಇತರ ಹಿಂದುಳಿದ ಸಾಮಾಜಿಕ ಗುಂಪುಗಳ ನಡುವೆ ಇದ್ದಂತಹ ಅಧಿಕಾರದ ಸಮತೋಲನವನ್ನು ಇದು ಬದಲಾಯಿಸಿತೆಂದು ಮತ್ತು "ಒಕ್ಕಲಿಗ ಮತ್ತು ಲಿಂಗಾಯತ ದಬ್ಬಾಳಿಕೆಯಿಂದ ಬಳಲುತ್ತಿರುವ ಗುಂಪುಗಳ ರಾಜಕೀಯ ಪ್ರಾಮುಖ್ಯತೆಯನ್ನು" ಸಾರಿತು ಎಂದು ಬ್ರಿಟಿಷ್ ವಿದ್ವಾಂಸ ಜೇಮ್ಸ್ ಮ್ಯಾನರ್ ವಾದಿಸುತ್ತಾರೆ.

ಎರಡನೇ ಪ್ರಮುಖ ರಾಜಕೀಯ ಪಲ್ಲಟವು 1980ರ ದಶಕದ ಆರಂಭದಲ್ಲಿ ಜರುಗಿತು. ಇದು ಕಾಂಗ್ರೆಸ್‌ನ ಚುನಾವಣಾ ಏಕಸ್ವಾಮ್ಯವನ್ನು ಕೊನೆಗೊಳಿಸಿತು ಮತ್ತು ಈ ಕಾಲಘಟ್ಟದಲ್ಲಿ ಜನತಾ ಪಕ್ಷದ ರೂಪದಲ್ಲಿ (ನಂತರ ಜನತಾ ದಳವಾಯಿತು) ಪ್ರಾದೇಶಿಕ ಕೇಂದ್ರೀಕೃತ ರಾಜಕೀಯ ಪರ್ಯಾಯವು ಹೊರಹೊಮ್ಮಿತು. ಕುತೂಹಲಕಾರಿ ಅಂಶವೆಂದರೆ, ಅರಸ್ ಕಾಲದಲ್ಲಿ ಕಾಂಗ್ರೆಸ್ ತನ್ನ ಸಾಮಾಜಿಕ ತಳಹದಿಯನ್ನು ಬೆಳೆಸಿಕೊಂಡಿತು. ಈಗ ಜನತಾ ಪಕ್ಷವು ಒಕ್ಕಲಿಗರು ಮತ್ತು ಲಿಂಗಾಯತರ ನಡುವಿನ ಪ್ರಾಬಲ್ಯ ಪ್ರದರ್ಶನಕ್ಕಾಗಿ ಹೊಸ ಅಖಾಡವಾಗಿದೆ.

ಮೂರನೇ ಪ್ರಮುಖ ರಾಜಕೀಯ ಪಲ್ಲಟವೆಂದರೆ ಕರ್ನಾಟಕದಲ್ಲಿ ಬಿಜೆಪಿಯು ಪ್ರಬಲ ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವುದನ್ನು ಗುರುತಿಸುವ ಅವಧಿಯಾಗಿದ್ದು, ಜನತಾ ದಳ ಕ್ಷೀಣಿಸುತ್ತಿರುವ ಕಾಲವಾಗಿದೆ. 1990ರ ದಶಕದ ಅಂತ್ಯದ ವೇಳೆಗೆ ಎಚ್.ಡಿ. ದೇವೇಗೌಡರು ಒಕ್ಕಲಿಗರನ್ನು ಒಟ್ಟುಗೂಡಿಸಿ ಜನತಾ ದಳ (ಜಾತ್ಯತೀತ) ರಚಿಸಿದರು, ಆದರೆ ಲಿಂಗಾಯತರು ಜೆ.ಎಚ್. ಪಟೇಲರ ನೇತೃದಲ್ಲಿ ಒಗ್ಗೂಡಿ ಜೆಡಿ(ಯು) ರಚಿಸಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡರು. ಕೆಲವೇ ವರ್ಷಗಳಲ್ಲಿ, ರಾಜ್ಯ ರಾಜಕೀಯದಲ್ಲಿ ಬಲಪಂಥೀಯ ಬದಲಾವಣೆಯು ಹಂತಹಂತವಾಗಿ ಬೇರೂರಿದಂತೆ ಕರ್ನಾಟಕವು ದಕ್ಷಿಣದಲ್ಲಿ ಬಿಜೆಪಿ ಸರ್ಕಾರವನ್ನು ಹೊಂದಿರುವ ಮೊದಲ ರಾಜ್ಯವಾಯಿತು. ಬ್ರಾಹ್ಮಣರು, ಲಿಂಗಾಯತರು, ಕೊಡವರು, ದಲಿತರು ಮತ್ತು ಹಿಂದುಳಿದ ವರ್ಗಗಳು ಸೇರಿದಂತೆ ವಿವಿಧ ಸಾಮಾಜಿಕ ಗುಂಪುಗಳ ಒಕ್ಕೂಟವನ್ನು ಬಿಜೆಪಿ ಹೊಂದಿರುವಾಗ, ಒಕ್ಕಲಿಗರು ಮತ್ತು ಮುಸ್ಲಿಂ ಸಮುದಾಯದ ಕೆಲ ವರ್ಗ ಇನ್ನೂ ಸಹ ಜೆಡಿ(ಎಸ್)ನೊಂದಿಗೆ ಇದ್ದಾವೆ. ಕಾಂಗ್ರೆಸ್ ಇನ್ನೂ ಸಹ ಅಹಿಂದ ಸೂತ್ರಕ್ಕೆ ಅಂಟಿಕೊಂಡಿದೆ.

ಈ ಮೂರು ರಾಜಕೀಯ ಪಲ್ಲಟಗಳ ಕಾಲದಲ್ಲಿ ವಿವಿಧ ಸಾಮಾಜಿಕ ಗುಂಪುಗಳ ನಡುವೆ ಅಧಿಕಾರದ ಪುನರ್ವಿತರಣೆಯಾಗಿದೆ, ಆದರೆ ಆರ್ಥಿಕ ನೀತಿಗಳ ಮೇಲೆ ಒಮ್ಮತವಾದ ಅಭಿಪ್ರಾಯವಿದ್ದು, ಅದೇ ಇನ್ನೂ ಮುಂದುವರಿಯುತ್ತಿದೆ. ಜುಲೈ 2019 ರಲ್ಲಿ ಅಧಿಕಾರಕ್ಕೆ ಬರುವ ಬಿಜೆಪಿಯು ಉನ್ಮಾದಿತ ಕೋಮು ಧ್ರುವೀಕರಣ ಮತ್ತು ಕಾರ್ಪೋರೇಟ್ ಸ್ನೇಹಿ ಆರ್ಥಿಕ ನೀತಿಗಳಿಗೆ ಕುಖ್ಯಾತಿ ಪಡೆದಿದ್ದು ಕರ್ನಾಟಕದಲ್ಲಿ ಪ್ರಮುಖ ರಾಜಕೀಯ ಬದಲಾವಣೆಯನ್ನು ತರುತ್ತದೆ.

ಬಿಜೆಪಿಯು 2014 ರಲ್ಲಿ ಕೇಂದ್ರದಲ್ಲಿ ಅಧಿಕಾರವನ್ನು ಹಿಡಿದ ನಂತರ, ಕಲ್ಯಾಣ ರಾಜ್ಯದ ಮಾರ್ಗಸೂಚಿಗಳನ್ನು ಕಿತ್ತುಹಾಕುವುದರ ಮೂಲಕ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಆರ್ಥಿಕ ಕಾರ್ಯಸೂಚಿಗಳನ್ನು ನಿರ್ದಯವಾಗಿ ಜಾರಿಗೊಳಿಸುತ್ತಿದೆ. ಯುದ್ಧಗಳು, ದಂಗೆಗಳು, ಭಯೋತ್ಪಾದಕ ದಾಳಿಗಳು, ಮಾರುಕಟ್ಟೆ ಕುಸಿತಗಳು ಅಥವಾ ನೈಸರ್ಗಿಕ ವಿಕೋಪಗಳಂತಹ ಸಂಧರ್ಭಗಳಲ್ಲಿ ಸಾರ್ವಜನಿಕರಲ್ಲಿ ಉಂಟಾಗುವ ಸಾಮೂಹಿಕ ದಿಗ್ಭ್ರಮೆಯನ್ನು ದುರುಪಯೋಗ ಪಡಿಸಿಕೊಂಡು ಕ್ರೂರ ತಂತ್ರಗಳನ್ನು ರೂಪಿಸುವುದಕ್ಕೆ ನಯೋಮಿ ಕ್ಲೇನ್ ಅವರು "ಆಘಾತ ಸಿದ್ಧಾಂತ" ಎಂದು ಕರೆಯುತ್ತಾರೆ. ಇದೇ ಮಾದರಿಯಲ್ಲಿ ಬಿಜೆಪಿ ಸರ್ಕಾರವು 2014 ರಿಂದಲೂ ಗುರಿಯಾಗಿರಿಸಿಕೊಂಡಿರುವ ಕಾರ್ಪೋರೇಟ್ ಪರವಾದ ನೀತಿಗಳನ್ನು ಜಾರಿಗೊಳಿಸುವುದಕ್ಕೆ ಕೋವಿಡ್ ಸಾಂಕ್ರಾಮಿಕವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಈ ವಿಪತ್ತಿನಿಂದ ರಾಜ್ಯದಲ್ಲಿ ದುಡಿಯುವ ಜನಸಾಮಾನ್ಯರ ಮೇಲೆ ಉಂಟಾಗಿದ್ದ ಪರಿಣಾಮವನ್ನು ಸಹ ಲೆಕ್ಕಿಸದೇ, ಕಾರ್ಮಿಕ, ಕೃಷಿ, ಭೂಮಾಲೀಕತ್ವ, ಕೈಗಾರಿಕೆಗಳಿಗೆ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಕಾನೂನುಗಳನ್ನು ಕೇಂದ್ರ ಮತ್ತು ಕರ್ನಾಟಕದಲ್ಲಿ ಆಡಳಿತದಲ್ಲಿರುವ ಬಿಜೆಪಿ ಸರ್ಕಾರ ತಿದ್ದುಪಡಿ ಮಾಡಿದೆ.

ಪ್ರಭಾತ್ ಪಟ್ನಾಯಕ್ ಅವರು ಪ್ರಜಾಪ್ರಭುತ್ವದ ಮೇಲಿನ ಈ ನವಫ್ಯಾಸಿಸ್ಟ್ ಆಕ್ರಮಣವು ಬಿಕ್ಕಟ್ಟಿನಿಂದ ಪಾರಾಗಲು ನವ ಉದಾರವಾದಿ ಬಂಡವಾಳಶಾಹಿಯ ಭಾಗದ ಪ್ರಯತ್ನವಾಗಿದೆ ಎಂದು ವಾದಿಸುತ್ತಾರೆ, ಕಾರ್ಪೋರೇಟ್ ಬಂಡವಾಳದ ಬೆಂಬಲದೊಂದಿಗೆ ಬೃಹತ್ ಹಣಕಾಸಿನ ಸಂಪನ್ಮೂಲಗಳಿಗೆ ಪ್ರವೇಶ ಮತ್ತು ಕಾರ್ಪೋರೇಟ್-ಮಾಲೀಕತ್ವದ ಮಾಧ್ಯಮ ಮತ್ತು ಇತರ ಅಭಿಪ್ರಾಯಗಳ ಮೇಲೆ ನಿಯಂತ್ರಣವನ್ನು ಒದಗಿಸುತ್ತದೆ-ಮಾಡುವುದು.

ಡಿಸೆಂಬರ್ 2021 ರ "ರಾಜ್ಯಗಳ ರಾಜ್ಯ" ವರದಿಯಲ್ಲಿ, ಕರ್ನಾಟಕವು ದೇಶದ 20 ದೊಡ್ಡ ರಾಜ್ಯಗಳಲ್ಲಿ 10 ನೇ ಸ್ಥಾನದಲ್ಲಿದೆ. ಹಲವಾರು ಸಾಧನೆಗಳೊಂದಿಗೆ ಪ್ರಗತಿಪರ ರಾಜ್ಯವೆಂದು ಖ್ಯಾತಿ ಹೊಂದಿದ ನಮ್ಮ ರಾಜ್ಯಕ್ಕೆ ಇದು ನಕಾರಾತ್ಮಕ ಚಿತ್ರಣವನ್ನು ನೀಡುತ್ತದೆ. ಅದರಲ್ಲೂ ಕೆಲವು ಕ್ಷೇತ್ರಗಳಲ್ಲಿ ಕರ್ನಾಟಕದ ಸಾಧನೆಯನ್ನು ನೋಡಿದರೆ ಬೇಸರವಾಗುತ್ತದೆ. ಆಡಳಿತದಲ್ಲಿ 15, ಪ್ರವಾಸೋದ್ಯಮದಲ್ಲಿ 16 ಮತ್ತು ಕೃಷಿಯಲ್ಲಿ 18 ಸ್ಥಾನದಲ್ಲಿದೆ ಮತ್ತು ಅಂತರ್ಗತ ಅಭಿವೃದ್ಧಿಯಲ್ಲಿ ಇದು ಕೊನೆಯ ಸ್ಥಾನ 20ನ್ನು ಪಡೆದಿದ್ದು ತಳಮಟ್ಟಕ್ಕೆ ತಲುಪುವ ಮೂಲಕ ಅತೀ ಕಳಪೆಯಾಗಿದೆ. ಇದು ರಾಜ್ಯದ ಬಹುಪಾಲು ಜನರು ಎದುರಿಸುತ್ತಿರುವ ಗಂಭೀರ ಬದುಕುಳಿಯುವ ಬಿಕ್ಕಟ್ಟನ್ನು ಪ್ರತಿಬಿಂಬಿಸುತ್ತದೆ.

ಈ ಹಂತದಲ್ಲಿ ಬಿಜೆಪಿಯಲ್ಲಿ ಯಡಿಯೂರಪ್ಪನವರಿಂದ ಬಸವರಾಜ ಬೊಮ್ಮಾಯಿವರೆಗೆ ಅಧಿಕಾರ ಹಸ್ತಾಂತರವಾಗಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿಯ ಮೊಟ್ಟಮೊದಲ ಸರ್ಕಾರದ ವಾಸ್ತುಶಿಲ್ಪಿಯಾದ ಯಡಿಯೂರಪ್ಪನವರ ಪ್ರಭಾವವನ್ನು ಕಡಿಮೆಗೊಳಿಸಿದ್ದನ್ನು ಊಹಿಸಲು ಸಾಧ್ಯವಿರಲಿಲ್ಲ. ತಬ್ಲೀಘಿ ಜಮಾತ್ ಅನ್ನು ಕೋಮುವಾದಕ್ಕೆ ಬಳಸುವವರ ವಿರುದ್ಧ ದಿನಾಂಕ 06.04.2020 ರಂದು ಯಡಿಯೂರಪ್ಪನವರು ಎಚ್ಚರಿಕೆ ನೀಡಿ ಹೇಳಿಕೆಯನ್ನು ನೀಡುವ ಮೂಲಕ ಹಲವಾರು ಪ್ರಮುಖ ಕೋಮು ವಿಷಯಗಳ ಬಗ್ಗೆ ಮಧ್ಯಮ ನಿಲುವು ಹೊಂದಿದ್ದರು.

ಈ ವಿಷಯದ ಗ್ರಹಿಕೆಯಿಂದಾಗಿಯೇ ಬಿಜೆಪಿ ಮತ್ತು ಸಂಘ ಪರಿವಾರದ ಪ್ರಮುಖ ನಾಯಕರು ಯಡಿಯೂರಪ್ಪನವರ ಪ್ರಭಾವವನ್ನು ಕಡಿಮೆ ಮಾಡುವುದಕ್ಕೆ ಅವರಿಂದ ಅಧಿಕಾರವನ್ನು ಕಸಿದುಕೊಂಡಿದ್ದಾರೆ. ನೇರ ಕಾರಣವಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. ಈ ಸಮಯದಲ್ಲಿ ಕರ್ನಾಟಕದ ರಾಜಕೀಯದ ಮೇಲೆ ಸಂಘ ಪರಿವಾರದ ಪ್ರಭಾವವನ್ನು ಬೀರುವುದು ಮತ್ತು ಕೋಮು ಧ್ರುವೀಕರಣವನ್ನು ಸಾಮಾನ್ಯ ವಿಷಯವನ್ನಾಗಿ ಮಾಡುವುದು ಆಗಿರುತ್ತದೆ.

ಅವರ ಉತ್ತರಾಧಿಕಾರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದಲ್ಲಿ ಕೋಮುವಾದಿ ಅಜೆಂಡಾವನ್ನು ಹೇರುವ ವೇಗವನ್ನು ಹೆಚ್ಚಿಸಿದ್ದಾರೆ. 2021 ರ ಅಕ್ಟೋಬರ್ 14 ರಂದು ಅವರು ಹಿಂದುತ್ವದ ದಂಗೆಕೋರರ ಚಟುವಟಿಕೆಗಳನ್ನು ಅನುಮೋದಿಸಿ ನೀಡಿದ ಹೇಳಿಕೆಯು 2023 ರ ವಿಧಾನಸಭಾ ಚುನಾವಣೆಯ ಮೊದಲು ತನ್ನ ಉಳಿದ ಅವಧಿಗೆ ಬಿಜೆಪಿಯು ಅದರ ಮೇಲೆ ತೆಗೆದುಕೊಳ್ಳಲಿರುವ ದಿಕ್ಕಿನ ಬಗ್ಗೆ ಸುಳಿವು ನೀಡಿತು.

ಭಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸೇರಿದಂತೆ ಸಂಘ ಪರಿವಾರದ ವಿವಿಧ ಸಂಘಟನೆಗಳಿಂದ ಹೆಚ್ಚುತ್ತಿರುವ 'ನೈತಿಕ ಪೋಲೀಸಿಂಗ್' ಘಟನೆಗಳ ಕುರಿತು ಮಾಧ್ಯಮದವರ ಪ್ರಶ್ನೆಗಳಿಗೆ ಉತ್ತರಿಸುತ್ತಾ "ಭಾವನೆಗಳಿಗೆ ನೋವುಂಟುಮಾಡಿದಾಗ, ಸಾಮಾನ್ಯವಾಗಿ ಕ್ರಿಯೆ ಮತ್ತು ಪ್ರತಿಕ್ರಿಯೆ ಇರುತ್ತದೆ" ಎಂದು ಬೊಮ್ಮಾಯಿ ಹೇಳಿದರು. ಇದು ಕೇವಲ ಹಿಂದುತ್ವ ಶಕ್ತಿಗಳ ಆಕ್ರಮಣಕ್ಕೆ ಅಧಿಕೃತ ಅನುಮತಿಯನ್ನು ಸೂಚಿಸಲಿಲ್ಲ, ಜೊತಗೆ ಕರ್ನಾಟಕದ ಆಡಳಿತದಲ್ಲಿ ಹಿಂದುತ್ವದ ಸಾಂಸ್ಥಿಕೀಕರಣವನ್ನು ಪ್ರತಿನಿಧಿಸುತ್ತದೆ.

ಕರ್ನಾಟಕವು ಕಳೆದ ಕೆಲವು ದಶಕಗಳಲ್ಲಿ ಕೋಮು ಧ್ರುವೀಕರಣವನ್ನು ಮತ್ತು ಅದಕ್ಕೆ ಪೂರಕವಾಗಿ ನಡೆದ ಕೋಮುಗಲಭೆಗಳನ್ನು ನೋಡಿದೆ. ಬಿಜೆಪಿ ಅಧಿಕಾರದಲ್ಲಿದ್ದಾಗ ವಿಎಚ್‌ಪಿ, ಬಜರಂಗದಳ ಮತ್ತು ಹಿಂದೂ ಜಾಗರಣ ವೇದಿಕೆಯಂತಹ ಹಿಂದುತ್ವ ಗುಂಪುಗಳು ತಮ್ಮ ರಾಜಕೀಯದಲ್ಲಿ ಹಾಗೂ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ವಿರುದ್ಧದ ಹಿಂಸಾಚಾರದಲ್ಲಿ ಲಜ್ಜೆಗೆಟ್ಟಿದ್ದಾವೆ ಮತ್ತು ಆಕ್ರಮಣಕಾರಿಯಾಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. "ಕೋಮು ಪೋಲೀಸಿಂಗ್‌ನಿಂದ ದ್ವೇಷದ ಅಪರಾಧಗಳವರೆಗೆ: ಅಂಬೇಡ್ಕರ್ ಅವರ ಸಹೋದರತ್ವದ ಕನಸಿನ ಮೇಲಿನ ದಾಳಿ" ಎಂಬ 2021ರ ಸೆಪ್ಟೆಂಬರ್ ವರದಿಯಲ್ಲಿ ದಾಖಲಾಗಿರುವಂತೆ, ಈ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಜರುಗಿದ ಕೋಮು ದ್ವೇಷದ ಅಪರಾಧಗಳು ಕೆಳಗಿನ ಮಾದರಿಗಳಲ್ಲಿ ಕಂಡುಬರುತ್ತವೆ.

**ಸಾಮಾಜಿಕ ಪ್ರತ್ಯೇಕತೆಯನ್ನು ಜಾರಿಗೊಳಿಸುವುದು:** ಹಿಂದುತ್ವ ಸಂಘಟನೆಗಳು, ರಾಜ್ಯ ಆಡಳಿತದ ಬಹಿರಂಗ ಮತ್ತು ರಹಸ್ಯ ಬೆಂಬಲದೊಂದಿಗೆ, ವಿಶೇಷವಾಗಿ ಮುಸ್ಲಿಮರನ್ನು ಸಮಾಜದ ಇತರೆ ಸಮುದಾಯಗಳಿಂದ ಸಾಮಾಜಿಕವಾಗಿ ಪ್ರತ್ಯೇಕಿಸುತ್ತವೆ. ಎಲ್ಲಾ ಅಂತರ-ಧಾರ್ಮಿಕ ನಂಬಿಕೆಗಳ ಸಾಮಾಜಿಕ ಒಡನಾಟವನ್ನು ಅವರು ನಿಷೇಧಿಸಿದ್ದಾರೆ.


**ಅನ್ಯೋನ್ಯತೆಯನ್ನು ನಿರ್ದೇಶಿಸುವುದು:** ಯಾವುದೇ ರೀತಿಯ ಅಂತರ-ಧರ್ಮೀಯ ಅನ್ಯೋನ್ಯ ಸಂಬಂಧಗಳನ್ನು ತಡೆಗಟ್ಟುವುದು ಹಿಂದುತ್ವ ಸಂಘಟನೆಗಳ ಕೇಂದ್ರೀಕೃತ ಚಟುವಟಿಕೆಗಳಲ್ಲಿ ಒಂದಾಗಿದೆ.

ಕಳೆದ ಕೆಲವು ವರ್ಷಗಳಿಂದ, ಇದು "ಲವ್ ಜಿಹಾದ್" ನ ಭರಾಟೆಯನ್ನು ಪ್ರಾರಂಭಿಸಿದೆ. ಈ ಸಂದರ್ಭದಲ್ಲಿ, ಅವರು ಅಂತರ್ ಧರ್ಮೀಯ ದಂಪತಿಗಳ ಮೇಲೆ ಆಕ್ರಮಣ ಮಾಡುತ್ತಾರೆ, ಅವರಿಗೆ ಬೆದರಿಕೆ ಹಾಕುತ್ತಾರೆ ಮತ್ತು ಹಲ್ಲೆ ಮಾಡುತ್ತಾರೆ. ಇಷ್ಟೆಲ್ಲಾ ಆದರೂ ಪೋಲೀಸರು ಮಾತ್ರ ತಲೆ ಹಾಕುವುದಿಲ್ಲ, ಆದರೆ ಆ ದಂಪತಿಗಳನ್ನು ಬಂಧಿಸಿಲು, ಅವರ ಸಂಬಂಧದ ಬಗ್ಗೆ ಅವರ ಪೋಷಕರಿಗೆ ತಿಳಿಸಲು ಮತ್ತು ಕೊನೆಯದಾಗಿ ಅವರಿಗೆ ಹಿಂದುತ್ವದ ಪ್ರಾಬಲ್ಯದ ಬಗ್ಗೆ ಸಲಹೆ ಮತ್ತು ಸೂಚನೆ ನೀಡ ಬಿಡುಗಡೆಮಾಡುವ ಕೆಲಸವನ್ನು ಮಾಡುತ್ತಾರೆ. ಸೆಪ್ಟೆಂಬರ್ 28, 2021 ರಂದು ಬೆಳಗಾವಿ ಜಿಲ್ಲೆಯಲ್ಲಿ ಹಿಂದುತ್ವ ಸಂಘಟನೆಯಾದ ಶ್ರೀರಾಮ ಸೇನೆ ಹಿಂದೂಸ್ತಾನ್‌ನ ಸಂಘಟನೆಯ ಸದಸ್ಯರಿಂದ ಅರ್ಬಾಜ್ ಮುಲ್ಲಾ ಎಂಬ ಯುವಕನನ್ನು ಬರ್ಬರವಾಗಿ ಹತ್ಯೆಗೈದ ಘಟನೆ ಸೇರಿದಂತೆ ಈ ಗುಂಪುಗಳು ನಡೆಸಿದ ತೀವ್ರ ಹಿಂಸಾಚಾರದ ಸಾಕಷ್ಟು ನಿದರ್ಶನಗಳಿವೆ.

**ಆರ್ಥಿಕ ಬಹಿಷ್ಕಾರ:** ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲು ಮತ್ತು ಅವರನ್ನು ಅಧೀನಗೊಳಿಸಲು ಬಳಸುವ ಇನ್ನೊಂದು ಸಾಧನವೆಂದರೆ ಆರ್ಥಿಕ ಬಹಿಷ್ಕಾರದ ಕರೆಗಳು. ಮುಸ್ಲಿಂ ಮಾರಾಟಗಾರರಿಂದ ಏನನ್ನು ಖರೀದಿಸದಂತೆ ಕರೆ ನೀಡಲಾಗುತ್ತದೆ, ಅವರೊಂದಿಗೆ ನಡೆಯುವ ವ್ಯಾಪಾರವನ್ನು ನಿಷೇಧಿಸುವಂತೆ ನೋಟಿಸ್ ನೀಡಲಾಗುತ್ತದೆ ಹಾಗೂ ಅವರು ವ್ಯಾಪಾರದಲ್ಲಿ ತೊಡಗುವುದನ್ನು ತಡೆಯಲು ದೈಹಿಕ ಹಲ್ಲೆಗಳನ್ನು ಸಹ ಮಾಡಲಾಗುತ್ತದೆ.

**ಕಾನೂನು ಬಾಹಿರ ಜಾಗೃತ ದಳ:** ಕನಿಷ್ಠ ಎರಡು ದಶಕಗಳಿಂದ ಹುಟ್ಟಿಕೊಂಡಿರುವ ಕಾನೂನು ಬಾಹಿರ ಧಾರ್ಮಿಕ ಜಾಗೃತದಳಗಳ ಕೇಂದ್ರವಾಗಿರುವ ಕರಾವಳಿ ಕರ್ನಾಟಕದಲ್ಲಿ ಹಿಂದುತ್ವ ಗುಂಪುಗಳ ಕಾನೂನು ಬಾಹಿರ ಚಟುವಟಿಕೆಗಳು ಉಲ್ಬಣಗೊಂಡಿವೆ. ಇದು ಕರ್ನಾಟಕದ ಇತರ ಭಾಗಗಳಿಗೂ ಹಬ್ಬಿದೆ. ಅಲ್ಪಸಂಖ್ಯಾರತನ್ನು ಸಾಮಾಜಿಕವಾಗಿ ಪ್ರತ್ಯೇಕಿಸಲು, ಅವರ ವಿರುದ್ಧ ದ್ವೇಷ ಹರಡಲು, ಅವರ ಮೇಲೆ ಜಾನುವಾರುಗಳ ಹೆಸರಲ್ಲಿ ದಾಳಿ ನಡೆಸಲು, ಅವರ ವಿರುದ್ಧ ಆರ್ಥಿಕ ಬಹಿಷ್ಕಾರಕ್ಕೆ ಕರೆ ನೀಡುವುದಕ್ಕಾಗಿ ಮತ್ತು ಅವರನ್ನು ತಾರತಮ್ಯ ಮಾಡಿ ಅಧೀನಗೊಳಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿದ್ದಾವೆ.

**ಧಾರ್ಮಿಕ ಸ್ವಾತಂತ್ರ್ಯಕ್ಕೆ ಕಡಿವಾಣ:** ಅಲ್ಪಸಂಖ್ಯಾತರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲು ಹಿಂದುತ್ವ ಸಂಘಟನೆಗಳು ಕಾರ್ಯಪ್ರವೃತ್ತವಾಗಿವೆ. ಅಲ್ಪಸಂಖ್ಯಾತರು "ಬಲವಂತದ ಧಾರ್ಮಿಕ ಮತಾಂತರಗಳಲ್ಲಿ" ತೊಡಗಿಸಿಕೊಳ್ಳುತ್ತಿದ್ದಾರೆ ಎಂಬ ಆಧಾರರಹಿತ ಆರೋಪವನ್ನು ಮಾಡಿ ಹಲವಾರು ಚರ್ಚ್‌ಗಳನ್ನು ಹಿಂದುತ್ವ ಗುಂಪುಗಳು ಧ್ವಂಸಮಾಡಿವೆ. ರಾಜ್ಯದಲ್ಲಿನ ಗುಪ್ತಚರ ಇಲಾಖೆಗೆ ಕರ್ನಾಟಕದಲ್ಲಿರುವ ಚರ್ಚ್‌ಗಳ ಸಂಖ್ಯೆಯನ್ನು ಸಮೀಕ್ಷೆ ಮಾಡುವ ಮತ್ತು ಪತ್ತೆಹಚ್ಚುವ ವಿಲಕ್ಷಣ ಕೆಲಸವನ್ನು ನೀಡಲಾಗಿದೆ ಎಂಬ ಅಂಶ ಬೆಳಕಿಗೆ ಬಂದಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿರುವಂತೆ ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತರಲು ಒತ್ತಡವನ್ನು ಹೇರುವುದಕ್ಕಾಗಿ ಆರ್ ಎಸ್‌ಎಸ್ ಈ ಎಲ್ಲಾ ದಾಳಿಗಳನ್ನು ಮಾಡಿಸುತ್ತಿದೆ.




**ಸಾಮಾಜಿಕ ಜಾಲಾತಾಣ, ಸುದ್ದಿ ಮಾಧ್ಯಮ ಮತ್ತು ಮುದ್ರಣ ಮಾಧ್ಯಮ ಒಳಗೊಂಡಂತೆ ಇತರೆ ಲಭ್ಯವಿರುವ ಎಲ್ಲಾ ಮಾರ್ಗಗಳನ್ನು ತಮ್ಮ ದ್ವೇಷದ ಭಾಷಣಕ್ಕಾಗಿ ವೇದಿಕೆಗಳನ್ನಾಗಿ ಬಳಸಿಕೊಳ್ಳುತ್ತಿದ್ದಾರೆ**

**ದ್ವೇಷ ಭಾಷಣ:** ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರಿಗೆ ಮೂಲಭೂತ ಹಕ್ಕುಗಳ ಅನುಭವವನ್ನು ನಿರಾಕರಿಸುವುದಕ್ಕಾಗಿ ಬಲಪಂಥೀಯ ಹಿಂದುತ್ವದ ನಾಯಕರುಗಳು ವಿಶೇಷವಾಗಿ ದ್ವೇಷದ ಭಾಷಣವನ್ನು ಅಸ್ತ್ರವನ್ನಾಗಿಸಿಕೊಂಡಿದ್ದಾರೆ.

ತಮ್ಮ ದ್ವೇಷ ಭಾಷಣಕ್ಕಾಗಿ ಸಾಮಾಜಿಕ ಜಾಲಾತಾಣ, ಸುದ್ದಿ ಮಾಧ್ಯಮ ಮತ್ತು ಮುದ್ರಣ ಮಾಧ್ಯಮ ಒಳಗೊಂಡಂತೆ ಇತರೆ ಲಭ್ಯವಿರುವ ಎಲ್ಲಾ ಮಾರ್ಗಗಳನ್ನು ತಮ್ಮ ದ್ವೇಷದ ಭಾಷಣಕ್ಕಾಗಿ ವೇದಿಕೆಗಳನ್ನಾಗಿ ಬಳಸಿಕೊಳ್ಳುತ್ತಿದ್ದಾರೆ.

ದ್ವೇಷದ ಭಾಷಣಗಳ ಮೂಲಕ ಅಲ್ಪಸಂಖ್ಯಾತರ ನಂಬಿಕೆಗಳನ್ನು ತುಚ್ಛವಾಗಿ ಕಾಣುವುದು ಮತ್ತು ಭಾರತದ ನಾಗರಿಕರಂತೆ ಕಾಣದೆ ಕಡೆಗಣಿಸಲಾಗುತ್ತದೆ.

ಕಾನೂನು ಮತ್ತು ನೀತಿಗಳನ್ನು ಜಾರಿಗೆ ತರುವ ಮೂಲಕ ಬಿಜೆಪಿ ಸರ್ಕಾರವು ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೆ ತರಲು ಹೊರಟಿದೆ. ಕ್ರಿಶ್ಚಿಯನ್ ಮಿಷನರಿಗಳು ಮತ್ತು ಚರ್ಚ್‌ಗಳು ಮತಾಂತರ ಮಾಡುತ್ತವೆ ಎಂಬ ಅಸತ್ಯವನ್ನು ಬಳಸಿಕೊಂಡು ಮತಾಂತರ ನಿಷೇಧ ಕಾನೂನನ್ನು ಬಿಜೆಪಿ ಸರ್ಕಾರವು ಮುಂದಿಡುತ್ತಿದೆ. "ಕರ್ನಾಟಕ ವಧೆ ತಡೆ ಮತ್ತು ಜಾನುವಾರುಗಳ ಸಂರಕ್ಷಣೆ ಕಾಯಿದೆ, 2020" ಅನ್ನು ವಿಧಾನ ಸೌಧದಲ್ಲಿ "ಗೋವಿನ ಪೂಜೆ" ನೆರವೇರಿಸುವ ಮೂಲಕ ಮತ್ತು ಎಂದು ಆಚರಣೆಯಿಲ್ಲರದ ನಡವಳಿಕೆಯ ಮೂಲಕ ಅಂಗೀಕರಿಸಲಾಯಿತು. ಆಹಾರ ನಮ್ಮ ಹಕ್ಕು (ನಮ್ಮ ಆಹಾರ ನಮ್ಮ ಹಕ್ಕು) ಒಕ್ಕೂಟವು ನವೆಂಬರ್ 2021 ರಲ್ಲಿ ಬಿಡುಗಡೆಗೊಳಿಸಿದ 'ಜೀವನೋಪಾಯವನ್ನು ಅಪರಾಧೀಕರಿಸುವುದು, ಕಾನೂನು ಬಾಹಿರ ಧಾರ್ಮಿಕ ಜಾಗೃತ ಗುಂಪುಗಳನ್ನು ಕಾನೂನುಬದ್ಧಗೊಳಿಸುವುದು' ಎಂಬ ವರದಿಯಲ್ಲಿ, ಗೋಹತ್ಯೆ ನಿಷೇಧ ಕಾನೂನ ಮುಸ್ಲಿಂ ಸಮುದಾಯವನ್ನು ಆರ್ಥಿಕವಾಗಿ ದುರ್ಬಲಗೊಳಿಸುವ ಕಾರಣಕ್ಕಾಗಿ ತಂದರೂ ಸಹ, ರೈತರು, ಜಾನುವಾರು ಮಾರಾಟಗಾರರು ಮತ್ತು ಗ್ರಾಹಕರ ಮೇಲೆ ಪರಿಣಾಮ ಬೀರುತ್ತದೆ ಮತ್ತು ಕರ್ನಾಟಕದ ಚರ್ಮ ಉದ್ಯಮ ಮಾಂಸ ಉದ್ಯಮದ ಆರ್ಥಿಕತೆಗೆ ದೊಡ್ಡ ಹೊಡೆತವನ್ನು ನೀಡುತ್ತದೆ ಎಂದು ತಿಳಿಸಲಾಗಿದೆ. ದಲಿತರು ಪ್ರಧಾನ ಆಹಾರವಾಗಿ ಸೇವಿಸುವ ಗೋಮಾಂಸವನ್ನು ಅವರಿಂದ ಕಸಿದುಕೊಳ್ಳಲಾಗಿದೆ, ಹೆಚ್ಚುವರಿಯಾಗಿ, ಚರ್ಮದ ವ್ಯಾಪಾರ ಸೇರಿದಂತೆ ದನದ ವ್ಯಾಪಾರದಲ್ಲಿ ಉದ್ಯೋಗದಲ್ಲಿರುವ ದಲಿತರೆಲ್ಲರೂ ಕೆಲಸ ಕಳೆದುಕೊಂಡಿದ್ದಾರೆ.

ಇನ್ನು, ರಂಗಾಯಣದ ಪರಿಸ್ಥಿತಿಯನ್ನು ಗಮನಿಸಿದರೆ, ಏನಾದರೂ ಮಾಡಿ ಎಲ್ಲಾ ಸಾರ್ವಜನಿಕ ಸಂಸ್ಥೆಗಳನ್ನು ವಶಪಡಿಸಿಕೊಳ್ಳುವಲ್ಲಿ ಸಂಘಪರಿವಾರವು ನಿರತವಾಗಿರುವುದು ಕಂಡುಬರುತ್ತದೆ. ಪ್ರಗತಿಪರ ದೃಷ್ಟಿಕೋನಕ್ಕೆ ಹೆಸರಾದ ರಂಗಾಯಣ ಈಗ ಸ್ವಯಂಘೋಷಿತ ಆರ್ ಎಸ್ ಎಸ್ ಕಾರ್ಯಕರ್ತ ಅಡ್ಡಂಡ ಕರಿಯಪ್ಪ ಅವರ ನೇತೃತ್ವದಲ್ಲಿದೆ ಮತ್ತು ಈ ಸ್ವಾಧೀನಕ್ಕೆ ಪ್ರಗತಿಪರ ಕಲಾವಿದರು, ಸಂಘಟನೆಗಳು ಮತ್ತು ನಾಗರಿಕರ ವಿರೋಧವೇ ಅಡ್ಡಿಯಾಗಿದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರ 2 ಕೋಟಿ ರೂಪಾಯಿಯನ್ನು ನೀಡಲು ನಿರಾಕರಿಸಿರುವ ಸಂದರ್ಭದಲ್ಲೇ, ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕ್ಯಾಂಪಸ್ ಸ್ಥಾಪಿಸಲು 100 ಎಕರೆ ಭೂಮಿ ಮತ್ತು 359 ಕೋಟಿ ರೂಪಾಯಿ ಮಂಜೂರು ಮಾಡುವ ಮೂಲಕ ಬಿಜೆಪಿ ಸರ್ಕಾರವು ಕನ್ನಡಕ್ಕಿಂತ ಸಂಸ್ಕೃತಕ್ಕೆ ವಿಶೇಷ ಸ್ಥಾನವನ್ನು ನೀಡುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಪದವಿಪೂರ್ವ ಕೋರ್ಸ್‌ಗಳಲ್ಲಿ ಕನ್ನಡ ಭಾಷೆಯನ್ನು ವಿರೋಧಿಸುವವರಿಗೆ ಸರ್ಕಾರ ಭೂಮಿ ಮತ್ತು ಹಣ ನೀಡುತ್ತಿರುವುದನ್ನು ಪ್ರಶ್ನಿಸಿ ಕನ್ನಡ ಪರ ಸಂಘಟನೆಗಳು ತೀವ್ರವಾದ ಸರಣಿ ಪ್ರತಿಭಟನೆಗಳನ್ನು ಮಾಡಿದ್ದಾರೆ.

ಈಗ ಸಂಘಪರಿವಾರ ಹಿಜಾಬ್ ಅನ್ನು ನೆಪವಾಗಿಟ್ಟುಕೊಂಡು ಕೋಮು ಬೆಂಕಿಯನ್ನು ಹಚ್ಚುತ್ತಿದೆ. 2021 ರ ಡಿಸೆಂಬರ್‌ನಲ್ಲಿ ಉಡುಪಿಯ ಸರ್ಕಾರಿ ಕಾಲೇಜಿನಲ್ಲಿ ಪ್ರಾರಂಭವಾದ ಘಟನೆ ರಾಜ್ಯಾದ್ಯಂತ ವಿವಿಧ ಸಂಸ್ಥೆಗಳಿಗೆ ಹರಡುವ ಮೂಲಕ ದೊಡ್ಡ ವಿವಾದಕ್ಕೆ ಕಾರಣವಾಯಿತು. ಎಬಿವಿಪಿ/ಆರ್ ಎಸ್‌ಎಸ್, ಕೇಸರಿ ಶಾಲು ಹೊದಿಸುವ ಅಭಿಯಾನದ ಮೂಲಕ, ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಹುಸಂಖ್ಯಾತ ದಲಿತ ಮತ್ತು ಬಹುಜನ ಸಮುದಾಯಗಳನ್ನು ಮೂಲಭೂತವಾದಿಗಳನ್ನಾಗಿಸಲು ಪ್ರಯತ್ನಿಸುತ್ತಿವೆ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಮುಸ್ಲಿಂ ಮತ್ತು ಈ ಸಮುದಾಯಗಳ ನಡುವೆ ಪರಸ್ಪರರ ವಿರೋಧವನ್ನು ಎತ್ತಿಕಟ್ಟುತ್ತಿವೆ. ದಲಿತರು, ಬಹುಜನರು ಮತ್ತು ಮಹಿಳೆಯರಿಗೆ ಶಿಕ್ಷಣವನ್ನು ನಿಷೇಧಿಸಿದ ಬ್ರಾಹ್ಮಣಶಾಹಿ ವ್ಯವಸ್ಥೆಯ ವಿರುದ್ಧ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಅವರ ವೀರ ಹೋರಾಟದ ಮೂಲಕ ಶಿಕ್ಷಣದ ಹಕ್ಕನ್ನು ಪಡೆದುಕೊಂಡವರು ಇದೇ ಸಮುದಾಯಗಳು ಎಂಬುವುದನ್ನು ಮರೆಯಲಾಗದು. ಮುಸ್ಲಿಮರನ್ನು ಎರಡನೇ ದರ್ಜೆಯ ಪೌರತ್ವಕ್ಕೆ ಇಳಿಸುವ ಪ್ರಕ್ರಿಯೆ ನಡೆಯುತ್ತಿರುವಾಗಲೂ, ಹರ್ಷ ಮಂದರ್ ಸೇರಿದಂತೆ ಹಲವರು ಎತ್ತುತ್ತಿರುವ ಪ್ರಶ್ನೆಯೆಂದರೆ, ನರಮೇಧವು ಹಿಂದುತ್ವ ಯೋಜನೆಯ ಕಠೋರ ಫಲಿತಾಂಶವೇ ಎಂಬುದಾಗಿದೆ. ಈ ಮಧ್ಯೆ, ದಲಿತರು ಮತ್ತು ಆದಿವಾಸಿಗಳ ಎರಡನೇ ದರ್ಜೆಯ ಪೌರತ್ವವನ್ನು ಸಾಮಾನ್ಯಗೊಳಿಸುವುದು ನಡೆಯುತ್ತಾಲೇ ಇದೆ.

ಅಸ್ಪೃಶ್ಯತೆಯ ವಿವಿಧ ಆಚರಣೆಗಳು ಸೇರಿದಂತೆ ಕರ್ನಾಟಕದಾದ್ಯಂತ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. 1ನೇ ಏಪ್ರಿಲ್ 2020 ಮತ್ತು 31ನೇ ಮಾರ್ಚ್ 2021 ರ ನಡುವೆ ಕರ್ನಾಟಕದಲ್ಲಿ 87 ಕೊಲೆಗಳು ಮತ್ತು 216 ಅತ್ಯಾಚಾರಗಳು ಸೇರಿದಂತೆ 2327 ಜಾತಿ ದೌರ್ಜನ್ಯಗಳು ವರದಿಯಾಗಿವೆ. ಕಳೆದ ವರ್ಷ ಒಟ್ಟು 1,504 ಪ್ರಕರಣಗಳು ದಾಖಲಾಗಿದ್ದವು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇಕಡಾ 54 ರಷ್ಟು ಪ್ರಕರಣಗಳು ಹೆಚ್ಚಾಗಿವೆ. ಹಿಂದೂ ಹುಡುಗಿಯೊಂದಿಗಿನ ಸಂಬಂಧಕ್ಕಾಗಿ ಅರ್ಬಾಜ್ ಮುಲ್ಲಾನನ್ನು ಶಿರಚ್ಛೇದ ಮಾಡಿ ಮತ್ತು ವಿರೂಪಗೊಳಿಸಿದರೆ, ಪ್ರಬಲ ಜಾತಿಯ ಹುಡುಗಿಯೊಂದಿಗಿನ ಸಂಬಂಧಕ್ಕಾಗಿ ದಲಿತ ಯುವಕ ದಾನಪ್ಪನನ್ನು ಕೊಲೆ ಮಾಡಲಾಯಿತು. ರಾಜ್ಯದ ಕ್ರಮಗಳು ಸಹ ಅವರ ಸಾಂಸ್ಕೃತಿಕ ಹಕ್ಕುಗಳ ಮೇಲೆ ಸ್ಪಷ್ಟವಾಗಿ ಆಕ್ರಮಣ ಮಾಡುತ್ತಿರುವುದನ್ನು ನೋಡುತ್ತವೆ, ಇದು ಗೋಹತ್ಯೆ ನಿಷೇಧದ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ, ಇದು ಮುಸ್ಲಿಮ್ ಮತ್ತು ದಲಿತರ ಆಹಾರ ಪದ್ಧತಿಯ ಮೇಲೆ ಮಾಡಿದ ದಾಳಿಯಾಗಿದೆ. ಮಧ್ಯಾಹ್ನದ ಊಟದಲ್ಲಿ ಮೊಟ್ಟೆಗಳನ್ನು ನಿಲ್ಲಿಸುವ ಪ್ರಯತ್ನಗಳು ಮತ್ತು ಬಲವಂತದ ಸಸ್ಯಾಹಾರವು ರಾಜ್ಯದಲ್ಲಿ ಬ್ರಾಹ್ಮಣೀಕರಣದ ಪ್ರಯತ್ನಗಳನ್ನು ಸೂಚಿಸುತ್ತದೆ.

ಜಾತಿ ಮತ್ತು ಕೋಮು ಧ್ರುವೀಕರಣವು ಕೇವಲ ಒಂದು ಗೊಂದಲವಲ್ಲ - ಇದು ಒಂದು ಕಾರ್ಯಸೂಚಿಯಾಗಿದೆ; ಇದು ಕೇವಲ ಚುನಾವಣಾ ಲಾಭವನ್ನು ಗಳಿಸುವ ತಂತ್ರವಲ್ಲ - ಇದು ರಾಜಕೀಯ; ಇದು ಪ್ರಧಾನವಾಗಿಲ್ಲದ ಸಂಸ್ಥೆಗಳು ನಡೆಸುವ ಚಟುವಟಿಕೆಗಳಲ್ಲ - ಇದು ರಾಜಕೀಯ ಪ್ರೋತ್ಸಾಹ ಮತ್ತು ಆಡಳಿತದ ಬೆಂಬಲವನ್ನು ಹೊಂದಿದೆ. ಈ ದೈನಂದಿನ ಭಯೋತ್ಪಾದಕ ಕೃತ್ಯಗಳು ಹಿಂದುತ್ವದ ಪ್ರಭಾವಕ್ಕೊಳಗಾಗಿ ತೀವ್ರಗಾಮಿಗಳಾಗಿರುವ ಪುರುಷರಿಂದ ನಡೆಯುತ್ತವೆ ಮತ್ತು ದೇಶದ ಸಾಮಾನ್ಯ ನಾಗರೀಕರ ಮೇಲೆ ನಡೆಸಲ್ಪಡುತ್ತವೆ, ಈ ಪುರುಷರು ಹೆಚ್ಚಾಗಿ ಮುಸ್ಲಿಮರಲ್ಲದವರು ಮತ್ತು ಬಹುಕಾಲದ ಅವಧಿಯಲ್ಲಿ ಬಹುಸಂಖ್ಯಾತ ರಾಜಕೀಯದಿಂದ ಅಮಾನವೀಯರಾಗಿದ್ದವರು.

ಕರ್ನಾಟಕವು ಈ ನಿರ್ಣಾಯಕ ರಾಜಕೀಯ ಕವಲುದಾರಿಯಲ್ಲಿ ಬಂದು ನಿಂತಿದೆ, ಜಾನಕಿ ನಾಯರ್ ಬರೆದಂತೆ, ಈ ಸಮಯದಲ್ಲಿ ರಾಜ್ಯ ಮತ್ತು ಅದರ ಸಂಸ್ಥೆಗಳು "ಹಿಂದೂ ರಾಷ್ಟ್ರ" ಮಾಡುವ ಗುರಿಯನ್ನು ಹೊಂದಿರುವವರ ಅಧೀನವಾಗಿವೆ ಮತ್ತು ಅದನ್ನು ನವ ಉದಾರವಾದಿ ಜಾಗತಿಕ ಕ್ರಮಕ್ಕೆ ಸೇರಿಸಬೇಕು.

★ **ಕ್ಲಿಫ್ಟನ್ ಡಿ' ರೊಜಾರಿಯೋ**

# ಕಾಂ. ದೀಪಾಂಕರ್ ಭಟ್ಟಾಚಾರ್ಯ ಅವರೊಂದಿಗೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮಾರ್ಕ್ಸಿಸ್ಟ್ ಸ್ಟಡೀಸ್ ಕಾರ್ಯಕ್ರಮ

ಭಾರತದಲ್ಲಿ ಮೂಡುತ್ತಿರುವ ಫ್ಯಾಸಿವಾದವನ್ನು ತಡೆಗಟ್ಟಲು ಐಕ್ಯರಂಗವನ್ನೂರ್ ಸೂಚಿಸುವುದು ಅಗತ್ಯವಾಗಿದೆ ಎಂದು, ಕಾಂ. ದೀಪಾಂಕರ್ ಭಟ್ಟಾಚಾರ್ಯ ಅವರು ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಮಾರ್ಕ್ಸಿಸ್ಟ್ ಸ್ಟಡೀಸ್ (IIMS) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಿಂದುತ್ವದ ಹೆಸರಿನಲ್ಲಿ ಭಾರತದಲ್ಲಿ ಫ್ಯಾಸಿವಾದ ರೂಪುಗೊಂಡಿದೆ ಮತ್ತು ಇದಕ್ಕೆ ಮೂರು ಲಕ್ಷಣಗಳು ಇವೆ ಎಂದರು. ಮೊದಲನೆಯದಾಗಿ, ಪ್ರಭುತ್ವದ ಸತತವಾದ ದಮನ ಮತ್ತು ಸಂವಿಧಾನವನ್ನು ಹಿಂದೂ ರಾಷ್ಟ್ರೀಯತೆ ದೃಷ್ಟಿಕೋನದಿಂದ ಅರ್ಥವಿವರಣೆಯ ಮೂಲಕ ನಮ್ಮ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಪ್ರತಿಷ್ಠಾನಗಳು ಪೊಳ್ಳುಗೊಳ್ಳುತ್ತಿರುವುದನ್ನು ನಾವು ನೋಡಬಹುದು. ಇತ್ತೀಚಿನಲ್ಲಿ ಪ್ರಧಾನ ಮಂತ್ರಿಯವರು ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳನ್ನು ಕಡೆಗಣಿಸಿ ಮೂಲಭೂತ ಕರ್ತವ್ಯಗಳನ್ನು ಎತ್ತಿಹಿಡಿಯಬೇಕೆಂಬ ಮಾತುಗಳನ್ನಾಡಿರುವುದು ಇದರ ಒಂದು ಉದಾಹರಣೆಯಾಗಿದೆ.

ಎರಡನೆಯದಾಗಿ, ಬ್ಯಾಂಕುಗಳ ಮತ್ತು ರೈಲ್ವೇಸ್ ಒಳಗೊಂಡಂತೆ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕ ಆಸ್ತಿಗಳ ಖಾಸಗೀಕರಣ ಮತ್ತು ಕಾರ್ಪೋರೇಟ್ ದಾಳಿಯನ್ನು ನಾವು ನೋಡಬಹುದಾಗಿದೆ.

ಅಧಿಕ ರಾಷ್ಟ್ರೀಯತೆಯ ಪ್ರಚೋದನೆಯನ್ನು ಎತ್ತಿಹಿಡಿಯುವಂತಹ 'ಟ್ರೋಲ್ ಆರ್ಮಿ', ಕೋಮುವಾದಿ ಗುಂಡಾಗಳ ಮುಖಾಂತರ ಹಿಂಸಾಚಾರವನ್ನು ಜನಸಾಮಾನ್ಯರ ಮತ್ತು ಪ್ರಗತಿಪರರ ಮೇಲೆ ಎಸಗುತ್ತಾ 'ಆಂತರಿಕ ಶತ್ರು'ಗಳನ್ನು ಸೃಷ್ಟಿಸಲಾಗುತ್ತಿರುವುದು ಫ್ಯಾಸಿವಾದದ ಬೆಳವಣಿಗೆಯ ಮೂರನೇ ಅಂಶ.

2014ರಿಂದ ಈ ಮೂರು ಅಂಶಗಳು ಕ್ರಮೇಣವಾಗಿ ಬೆಳೆಯುತ್ತಿರುವುದಲ್ಲದೆ ಇವುಗಳು ಭಾರತೀಯ ಸಮಾಜ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಗಳನ್ನು ತರುತ್ತಿದೆ. "ವೀರ" ಸಾವರ್ಕರ್ ಎಂಬಂತಹ ಹಿಂದುತ್ವ ಸಿದ್ಧಾಂತವಾದಿಗಳನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಎತ್ತಿಹಿಡಿದು ಭಾರತೀಯ ರಾಷ್ಟ್ರೀಯತೆಯ ಪರಿಕಲ್ಪನೆಯನ್ನೇ ಬದಲಾಯಿಸಲು ಪ್ರಯತ್ನಿಸಲಾಗುತ್ತಿದೆ. ಸಾರ್ವಜನಿಕ ಒಡೆತನದಿಂದ ಖಾಸಗೀಕರಣದೆಡೆಗೆ ರಾಷ್ಟ್ರೀಯತೆಯ ಪರಿಭಾಷೆಯು ಬದಲಾಗುತ್ತಿರುವುದನ್ನು ನಾವು ಕಾಣಬಹುದಾಗಿದೆ. ದಲಿತರು, ಮಹಿಳೆಯರು ಮತ್ತು ಆದಿವಾಸಿಗಳ ವಿರುದ್ಧ ಹಿಂದುತ್ವದ ದಾಳಿ ಅತಿಹೆಚ್ಚಾಗಿದ್ದರೂ ಈ ಸಮುದಾಯಗಳಿಂದ ಫಾಸಿವಾದದ ವಿರುದ್ಧ ಜನಸಮೂಹದಂತಹ ಪ್ರತಿರೋಧವನ್ನು ನೋಡಿರುವುದಿಲ್ಲ. ವಿರೋಧ ಪಕ್ಷಗಳಾದಂತಹ ಕಾಂಗ್ರೆಸ್, ಸಮಾಜ ನ್ಯಾಯಕ್ಕಾಗಿರುವ ರಾಜಕೀಯ ಪಕ್ಷಗಳು ಮತ್ತು ಕಮ್ಯುನಿಸ್ಟ್ ಪಕ್ಷಗಳ ದುರ್ಬಲತೆಯ ಕಾರಣ ಹಿಂದುತ್ವ ಪಡೆಗಳು ಬಲಿಷ್ಠರಾಗಿದ್ದಾರೆ.

ಈ ನಿಟ್ಟಿನಲ್ಲಿ ಫ್ಯಾಸಿವಾದವನ್ನು ಸೋಲಿಸಲು ಐಕ್ಯರಂಗಗಳನ್ನು ರಚಿಸುವುದು ಅತಿಮುಖ್ಯವಾಗಿದೆ ಎಂದು ಕಾಂ. ದೀಪಾಂಕರ್ ಅವರು ಹೇಳಿದರು. ನಾಗರಿಕತೆ ಕಾಯ್ದೆಯ ವಿರುದ್ಧದ ಜನಾಂದೋಲನ ಮತ್ತು ರೈತ ಚಳುವಳಿಗಳಿಂದ ನಾವು ಸ್ಫೂರ್ತಿ ಪಡೆದಿದ್ದೇವೆ. ಸಣ್ಣಸಣ್ಣ ಚಳುವಳಿಗಳು ಮತ್ತು ಜನಾಂದೋಲನಗಳ ಮಧ್ಯೆ ಒಡಂಬಡಿಕೆಯನ್ನು ಬೆಳೆಸಿ ಇಂತಹ ಜನಚಳುವಳಿಗಳಿಗೆ ಉತ್ತೇಜನ ನೀಡಬೇಕಾಗಿದೆ. ಜಾಗತಿಕ ಹವಾಮಾನ ಬದಲಾವಣೆಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳು, ದುಡಿಯುವ ವರ್ಗಗಳ ಮತ್ತು ವಿದ್ಯಾರ್ಥಿ ಹೋರಾಟಗಳು ಪ್ರತಿರೋಧದ ಹುಮ್ಮಸ್ಸನ್ನು ಜೀವಂತವಿಟ್ಟಿದೆ. ಭಗತ್ ಸಿಂಗ್ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಮುಂದಿಟ್ಟು, ನಮ್ಮ ಹೋರಾಟಗಳನ್ನು ರೂಪಿಸಬೇಕಿದೆ. ಜನಾಂದೋಲನಗಳನ್ನು ಈ ರೀತಿಯಲ್ಲಿ ಕಟ್ಟುವುದಲ್ಲದೆ, ಚುನಾವಣೆಯ ಸಮಯದಲ್ಲಿ ಮೈತ್ರಿಕೂಟಗಳನ್ನು ರೂಪಿಸಿ ಅದರ ಮೂಲಕ ಹಿಂದುತ್ವ ಪಕ್ಷಗಳನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಹೇಳಿದರು.

★ **ಆಕಾಶ್ ಭಟ್ಟಾಚಾರ್ಯ**




**ಭಾರತದಲ್ಲಿ ಮೂಡುತ್ತಿರುವ ಫ್ಯಾಸಿವಾದವನ್ನು ತಡೆಗಟ್ಟಲು ಐಕ್ಯರಂಗವನ್ನು ರಚಿಸುವುದು ಅಗತ್ಯವಾಗಿದೆ ಎಂದು, ಕಾಂ. ದೀಪಾಂಕರ್ ಭಟ್ಟಾಚಾರ್ಯ ಅವರು IIMS ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು**

# ಎಐಎಲ್‌ಎಜೆನ (AILAJ) ರಾಷ್ಟ್ರೀಯ ಮಟ್ಟದ ಮೊದಲ ಸಭೆ ಬೆಂಗಳೂರಿನಲ್ಲಿ

ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ (ಎಐಎಲ್‌ಎಜೆ) ರಾಷ್ಟ್ರೀಯ ಸಂಚಾಲಕರ ಸಭೆಯು 2021 ರಲ್ಲಿ ಡಿಸೆಂಬರ್ 18 ರಿಂದ 19 ರವರೆಗೆ ಬೆಂಗಳೂರಿನಲ್ಲಿ ನಡೆಯಿತು.

ಇದರಲ್ಲಿ ತಮಿಳುನಾಡು, ಕೇರಳ, ಒಡಿಶಾ, ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ದೆಹಲಿ ಮತ್ತು ಕರ್ನಾಟಕದಿಂದ ವಕೀಲರು ಮತ್ತು ಕಾನೂನು ವಿದ್ಯಾರ್ಥಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ಎಐಎಲ್‌ಎಜೆ ಉದ್ದೇಶ ಮತ್ತು ಗುರಿಯನ್ನು ಕುರಿತು ಚರ್ಚಿಸಲಾಯಿತು ಮತ್ತು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತು.

ಈ ಅಸೋಷಿಯೇಷನ್ ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಪ್ರಾರಂಭವಾಗಿದ್ದು, ಅಂದಿನಿಂದಲೂ ಕಾನೂನು ವೃತ್ತಿಯಲ್ಲಿ ತೊಡಗಿಕೊಂಡಿರುವವರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಪರಿಹಾರ ಕಂಡುಕೊಳ್ಳುವಲ್ಲಿ ಅತೀವ ಕಾಳಜಿ ಹೊಂದಿರುತ್ತದೆ ಮತ್ತು ವಕೀಲ ವೃತ್ತಿಪರರ ನಡುವೆ ಭ್ರಾತೃತ್ವದ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಕೆಲಸ ನಿರ್ವಹಿಸುತ್ತಿದೆ ಮತ್ತು ಅದನ್ನು ಮುಂದುವಸಲಾಗುತ್ತದೆ.

ಕೋವಿಡ್ ಸಾಂಕ್ರಾಮಿಕ ರೋಗ ಮತ್ತು ಲಾಕ್‌ಡೌನ್‌ಗಳು ಬಹುಪಾಲು ವಕೀಲರು ಮತ್ತು ಕಾನೂನು ವೃತ್ತಿಯಲ್ಲಿ ತೊಡಗಿರುವ ಇತರೆ ವ್ಯಕ್ತಿಗಳು ಸೇರಿದಂತೆ ಬಹುತೇಕ ಜನರ ಜೀವನೋಪಾಯವನ್ನು ಹಾಳುಮಾಡಿವೆ. ಕೇಂದ್ರ/ರಾಜ್ಯ ಸರ್ಕಾರಗಳು, ಬಾರ್ ಕೌನ್ಸಿಲ್‌ಗಳು ಮತ್ತು ವಕೀಲರ ಸಂಘಗಳು ಈ ಸಂಕಷ್ಟದ ಸಮಯದಲ್ಲಿ ಕಾನೂನು ವೃತ್ತಿ ಭಾಂಧವರಿಗೆ ಸಮರ್ಪಕ ಪರಿಹಾರವನ್ನು ಘೋಷಿಸದೇ ಮತ್ತು ಅವರನ್ನು ನಿರ್ಲಕ್ಷಿಸುವ ಮೂಲಕ ರಕ್ಷಿಸುವಲ್ಲಿ ವಿಫಲವಾಗಿವೆ.

ಅಲ್ಲದೆ ಈ ಸಮಯದಲ್ಲಿ ಶಿಕ್ಷಣವು ಡಿಜಿಟಲ್ ಆಗಿ ಮಾರ್ಪಾಡು ಹೊಂದಿದ ಕಾರಣ ಸಾಕಷ್ಟು ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಲ್ಲಿ ವಂಚಿತರಾದರು ಮತ್ತು ಆರ್ಥಿಕವಾಗಿ ಸಂಕಷ್ಟವನ್ನು ಎದುರಿಸಬೇಕಾಯಿತು. ವಿದ್ಯಾರ್ಥಿಗಳ ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸರ್ಕಾರಗಳು ಮತ್ತು ಕಾಲೇಜುಗಳ ಆಡಳಿತ ಮಂಡಳಿಗಳು ವೈಫಲ್ಯ ಹೊಂದಿದ್ದರಿಂದಾಗಿ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಯಿತು ಎಂಬ ವಿಚಾರ ಕುರಿತು ಚರ್ಚಿಸಲಾಯಿತು.

ಈ ಸಮಯದಲ್ಲಿ ಎಐಎಲ್‌ಎಜೆ ಕೈಗೊಂಡಿದ್ದ ಕಾರ್ಯಚಟುವಟಿಕೆಗಳ ವರದಿಯನ್ನು ಮಂಡಿಸಲಾಯಿತು. ಕೋವಿಡ್ ಸಾಂಕ್ರಾಮಿಕ ಮತ್ತು ಯೋಜಿತವಲ್ಲದ ಲಾಕ್‌ಡೌನ್‌ನ ಪರಿಣಾಮಗಳಿಂದ ಸಂಕಷ್ಟ ಅನುಭವಿಸುತ್ತಿದ್ದ ಕಾನೂನು ವೃತ್ತಿ ಬಾಂಧವರಿಗೆ ಹಣಕಾಸಿನ ಸಹಾಯಕ್ಕಾಗಿ ಅಭಿಯಾನವನ್ನು ಕೈಗೊಳ್ಳಲಾಗಿತ್ತು, ಜನವಿರೋಧಿ ಕೃಷಿ ಕಾನೂನುಗಳ ವಿರುದ್ಧ ರೈತರ ಹೋರಾಟಗಳಿಗೆ ನಿರಂತರ ಬೆಂಬಲವನ್ನು ವ್ಯಕ್ತಪಡಿಸಲಾಗಿತ್ತು; ಜನರ ಭಿನ್ನಾಭಿಪ್ರಾಯವನ್ನು ಶಮನಗೊಳಿಸಲು ಯುಎಪಿಎ ಬಳಸುವುದರ ವಿರುದ್ಧ ವಿಶೇಷವಾಗಿ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿಸಲಾಗಿದ್ದವರ ಪರ ಪ್ರತಿಭಟನೆಗಳನ್ನು ನಡೆಸಲಾಯಿತು ಎಂಬ ಮುಖ್ಯ ಅಂಶಗಳನ್ನು ಒಳಗೊಂಡಂತೆ ಇತರೆ ಪ್ರಗತಿಪರ ವಿಚಾರಗಳಲ್ಲಿ ಭಾಗವಹಿಸಿದ ಬಗ್ಗೆ ವಿಸ್ತೃತವಾದ ವಿಷಯಗಳನ್ನು ವರದಿಯು ಹೊಂದಿದೆ. ಅಲ್ಲದೆ ಸರ್ವೋಚ್ಚ ಮತ್ತು ಉಚ್ಚನ್ಯಾಯಾಲಯಗಳು ನೀಡಿದ ಜನವಿರೋಧಿ ತೀರ್ಪುಗಳು ಮತ್ತು ಅದರ ಪರಿಣಾಮ ಕುರಿತು ಎಐಎಲ್‌ಎಜೆ ನೀಡಿದ ವಿವಿಧ ಹೇಳಿಕೆಗಳನ್ನು ವರದಿಯು ವಿವರಿಸಿದೆ. ಹಿಂದುತ್ವ ಫ್ಯಾಸಿಸ್ಟ್ ಶಕ್ತಿಗಳ ಜಾತಿವಾದಿ ಮತ್ತು ಕೋಮುವಾದಿ ಅಜೆಂಡಾದ ವಿರುದ್ಧ ಎಐಎಲ್‌ಎಜೆ ಸಕ್ರಿಯವಾಗಿ ಹೋರಾಡುತ್ತಿದೆ ಎಂಬುವುದು ವರದಿಯ ಮುಖ್ಯ ಅಂಶವಾಗಿದೆ. ಕಾರ್ಪೊರೇಟ್ ಲೂಟಿ ಮತ್ತು ಜಾತಿವಾದಿ/ಕೋಮುವಾದಿ ಆಕ್ರಮಣದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ ಸಂಕಲ್ಪದೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಹೀಗಿರುವ ಸ್ಫೂರ್ತಿಯೊಂದಿಗೆ ಕಾರ್ಯಯೋಜನೆಗಳನ್ನು ಕಾರ್ಯಗತಗೊಳಿಸಲು ಎಐಎಲ್‌ಎಜೆ ತನ್ನ ಚಟುವಟಿಕೆಗಳನ್ನು ಸಂಘಟಿಸಲು ಬದ್ಧವಾಗಿದೆ ಮತ್ತು ಈ ಕೆಳಗಿನವುಗಳಿಗೆ ತಕ್ಷಣವೇ ಕಾರ್ಯಪ್ರವೃತ್ತರಾಗುವುದು ಅಗತ್ಯವೆಂದು ನಿರ್ಧರಿಸಲಾಯಿತು:

ಕಾನೂನು ವೃತ್ತಿಯಲ್ಲಿ ತೊಡಗಿರುವ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಯೋಚನೆಯುಳ್ಳ ವ್ಯಕ್ತಿಗಳನ್ನು ಒಳಗೊಂಡಂತೆ ಎಐಎಲ್‌ಎಜೆ ಅನ್ನು ಒಂದು ಸಾಮೂಹಿಕ ಸಂಘಟನೆಯಾಗಿ ನಿರ್ಮಿಸುವುದು.

ವಕೀಲರು ಮತ್ತು ಕಾನೂನು ವೃತ್ತಿಯಲ್ಲಿ ತೊಡಗಿರುವವರ ಸಾಮಾಜಿಕ ಸಂಬಂಧಗಳಲ್ಲಿ ಗೋಚರವಾಗುತ್ತಿರುವ ಮತ್ತು ಸಮಾಜದಲ್ಲಿ ಅತಿರೇಕವಾಗಿರುವ ಜಾತೀಯತೆ ಮತ್ತು ಕೋಮು ಧ್ರುವೀಕರಣವನ್ನು ಕಿತ್ತೊಗೆಯುವುದು.

ವಕೀಲರ ನಡುವೆ ಆರ್ಥಿಕವಾಗಿ ಅಸಮಾನತೆ ಹೆಚ್ಚಿದೆ, ವಿಶೇಷವಾಗಿ ಸಾಮಾಜಿಕವಾಗಿ ತುಳಿತಕ್ಕೊಳಗಾದ ವರ್ಗಗಳಿಂದ ಬಂದವರು ಜೀವನ ನಿರ್ವಹಣೆ ಮಾಡಲು ಸಹ ಹೆಣಗಾಡುತ್ತಿದ್ದಾರೆ. ಇವರ ಸುಗಮ ಜೀವನೋಪಾಯಕ್ಕಾಗಿ ಕಿರಿಯ ವಕೀಲರಿಗೆ ಸ್ಟೈಫಂಡ್, ವೈದ್ಯಕೀಯ ವಿಮೆ ಮತ್ತು 60 ವರ್ಷ ಮೇಲ್ಪಟ್ಟ ವಕೀಲರಿಗೆ ಪಿಂಚಣಿ ಸೌಲಭ್ಯ ಒದಗಿಸುವಂತೆ ಕೇಂದ್ರ/ರಾಜ್ಯ ಸರ್ಕಾರ ಮತ್ತು ಬಾರ್ ಕೌನ್ಸಿಲ್‌ಗಳಲ್ಲಿ ಬೇಡಿಕೆಯನ್ನು ಸಲ್ಲಿಸಬೇಕು.

ಕಾನೂನು ವಿದ್ಯಾರ್ಥಿಗಳ ನಡುವೆ ಎಐಎಲ್‌ಎಜೆ ಅನ್ನು ನಿರ್ಮಿಸುವುದು ಮತ್ತು ಪ್ರಸ್ತುತ ಸನ್ನಿವೇಶದಲ್ಲಿ ಶಿಕ್ಷಣ ಪಡೆಯಲು ಆಗುತ್ತಿರುವ ತೊಂದರೆ ವಿರುದ್ಧ, ವಿದ್ಯಾರ್ಥಿವೇತನಗಳಿಗಾಗಿ, ಇಂಟರ್ನ್‌ಶಿಪ್ ಸ್ಟೈಫಂಡ್‌ಗಾಗಿ ಮತ್ತು ಇತ್ಯಾದಿಗಳನ್ನು ಒಳಗೊಂಡಂತೆ ಅವರಿಗೆ ಸಂಬಂಧಿಸಿದ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತುವುದು ಮತ್ತು ಹೋರಾಟ ಮಾಡುವುದು. ಹಾಗೆಯೇ ವಕೀಲರ ಕಚೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗುಮಾಸ್ತರು ಮತ್ತು ಕಾನೂನಿಗೆ ಸಂಬಂಧಿಸಿದ ಕೆಲಸಗಳಲ್ಲಿ ನಿರತರಾಗಿರುವ ಇತರ ಸಿಬ್ಬಂದಿಗಳ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತುವ ಕಾರ್ಯವನ್ನು ಕೈಗೊಳ್ಳಬೇಕು.

ಸಂವಿಧಾನದ ಬಗ್ಗೆ ಅರಿವು ಮೂಡಿಸಲು ಮತ್ತು ಸಾಮಾನ್ಯ ಜನರಿಗೆ ಕಾನೂನು ಸೇವೆ ಪಡೆಯಲು ಅನುಕೂಲವಾಗುವಂತಹ ವಿಚಾರ ಸಂಕಿರ್ಣಗಳು ಮತ್ತು ಕಾನೂನು ಅರಿವು ಕಾರ್ಯಕ್ರಮಗಳನ್ನು ನಡೆಸುವುದು.

ನ್ಯಾಯಾಂಗದ ಸ್ವಾತಂತ್ರ್ಯವನ್ನು ರಕ್ಷಿಸಲು, ನ್ಯಾಯಾಲಯಗಳಲ್ಲಿ ಎಲ್ಲಾ ರೀತಿಯ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಮತ್ತು

★

ನ್ಯಾಯಾಂಗದಲ್ಲಿ ಸಮಾಜದ ಎಲ್ಲಾ ವರ್ಗಗಳ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಸದಾ ಜಾಗೃತರಾಗಿರುವುದು. ದಲಿತರು ಮತ್ತು ಆದಿವಾಸಿಗಳ ಮೇಲಿನ ದೌರ್ಜನ್ಯಗಳ ವಿರುದ್ಧ ಕರಪತ್ರಗಳನ್ನು ಹೊರತರುವ ಮೂಲಕ ಮತ್ತು ದಲಿತರು ಮತ್ತು ಆದಿವಾಸಿಗಳನ್ನು ರಕ್ಷಿಸುವ ಕಾನೂನಿನ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಹೋರಾಟ ಮಾಡುವುದು.

ಭಾರತದ ಜಾತ್ಯಾತೀತ ಸ್ವರೂಪಕ್ಕಿರುವ ಬೆದರಿಕೆಯ ವಿರುದ್ಧ ಮತ್ತು ಸಮಾಜದಲ್ಲಿನ ಕೋಮು ಧ್ರುವೀಕರಣದ ವಿರುದ್ಧ ವಿಶೇಷವಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲಿನ ದಾಳಿಗಳ ವಿರುದ್ಧ ಹೋರಾಟ ಮಾಡುವುದು.

ಯುಎಪಿಎ, ಎಎಸ್‌ಎಫ್‌ಪಿಎ, ಎನ್‌ಐಎ, ಎನ್‌ಎಸ್‌ಎ ಮತ್ತು ದೇಶದ್ರೋಹದ ಕಾನೂನು ಇತ್ಯಾದಿಗಳನ್ನು ಒಳಗೊಂಡಂತೆ ಕಠಿಣ ಮತ್ತು ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳ ವಿರುದ್ಧ ಹೋರಾಡುವುದು ಮತ್ತು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಹೋರಾಡುವುದು.

75ನೇ ವರ್ಷದ ಸ್ವಾತಂತ್ರ್ಯೋತ್ಸವದ ಈ ವರ್ಷದಲ್ಲಿ, ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ವಕೀಲರು ನಿರ್ವಹಿಸಿದ ಪ್ರಮುಖ ಪಾತ್ರವನ್ನು ಮತ್ತು ಅವರ ಜಾತ್ಯತೀತ, ಸಮಾಜವಾದಿ ಮತ್ತು ಪ್ರಜಾಪ್ರಭುತ್ವ ಭಾರತದ ಕನಸನ್ನು ಪ್ರಚುರಪಡಿಸುವುದು.

ಲೈಂಗಿಕ ಕಿರುಕುಳದ ವಿರುದ್ಧ ಎಐಎಲ್‌ಎಜೆಯು ಲಿಂಗ ಸಂವೇದನೆ ಸಮಿತಿಯನ್ನು ರಚಿಸುವುದು.

ಪ್ರತಿ ರಾಜ್ಯದಲ್ಲಿ ಎಐಎಲ್‌ಎಜೆ ಅನ್ನು ಬಲಪಡಿಸಿ ಮತ್ತು ದೇಶದ ಎಲ್ಲಾ ರಾಜ್ಯಗಳಲ್ಲಿ ಎಐಎಲ್‌ಎಜೆ ಬೆಳೆಯುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರೀತಿಯ ಕಾರ್ಯಚಟುವಟಿಕೆಯನ್ನು ರೂಪಿಸುವುದು.

ರಾಷ್ಟ್ರೀಯ ಸಮ್ಮೇಳನದ ಮೊದಲು, ಎಲ್ಲಾ ಎಐಎಲ್‌ಎಜೆ ರಾಜ್ಯ ಘಟಕಗಳು ಸದಸ್ಯತ್ವವನ್ನು ವೃದ್ಧಿಸಲು ಕ್ರಮ ಕೈಗೊಳ್ಳಬೇಕು, ಅದರ ರಾಜ್ಯ ಸಮಿತಿಗಳನ್ನು ರಚಿಸಬೇಕು ಮತ್ತು ಅದರ ರಾಜ್ಯ ಸಮ್ಮೇಳನಗಳನ್ನು ಮಾಡಿರಬೇಕು.

ಎಐಎಲ್‌ಎಜೆಯ ರಾಷ್ಟ್ರೀಯ ಸಮ್ಮೇಳನವು ಮೇ 28 ಮತ್ತು 29, 2022 ರಂದು ಕೋಲ್ಕತ್ತಾದಲ್ಲಿ ನಡೆಯಲಿದೆ. ಪ್ರತಿ ರಾಜ್ಯ ಘಟಕವು ತಮ್ಮ ರಾಜ್ಯದಿಂದ ಭಾಗವಹಿಸುವ ಪ್ರತಿನಿಧಿಗಳ ಸಂಖ್ಯೆಯನ್ನು ರಾಷ್ಟ್ರೀಯ ಸಂಚಾಲಕರಿಗೆ ತಿಳಿಸಬೇಕು.

ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡ ನಂತರ ಸಭೆಯು ನಿರ್ಧರಿಸಿದಂತೆ, ಮುಂದಿನ ರಾಷ್ಟ್ರೀಯ ಸಮ್ಮೇಳನದ ಅಂತಿಮ ಅನುಮೋದನೆಗೆ ಒಳಪಟ್ಟು ಎಐಎಲ್‌ಎಜೆಯ ಮೂಲ ದಾಖಲೆಯನ್ನು ಅಂಗೀಕರಿಸಲಾಯಿತು. ★

## ವಿದ್ಯಾರ್ಥಿಗಳ ಸಭೆ







**ಅಖಿಲ ಭಾರತ ವಿದ್ಯಾರ್ಥಿ ಸಂಘ (AISA) ವತಿಯಿಂದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಐಸಾ ರಾಷ್ಟ್ರ ಅಧ್ಯಕ್ಷರಾದ ಕಾಂ. ಸಾಯಿ ಬಾಲಾಜಿ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ನೂತನ ಶಿಕ್ಷಣ ನೀತಿ 2020, ವಿದ್ಯಾರ್ಥಿಗಳು ಅನುಭವಿಸುತ್ತಿರುವ ಸಮಸ್ಯೆಗಳು, ಮತ್ತು ಇತರೆ ವಿಚಾರಗಳ ಕುರಿತು ಚರ್ಚೆ ನಡೆಸಲಾಯಿತು.** ★

# ಮಾರ್ಕ್ಸ್‌ವಾದ ಎಂದರೇನು?

ಕಾಮ್ರೇಡ್ ಲೆನಿನ್ ಅವರ "ಮೂರು ಮೂಲಗಳು ಮತ್ತು ಮಾರ್ಕ್ಸ್ ವಾದದ ಮೂರು ಘಟಕ ಭಾಗಗಳು" ಎಂಬ ಲೇಖನದ ಮೂಲಕ ಮಾರ್ಕ್ಸ್ ವಾದವನ್ನು ಅರ್ಥಮಾಡಿಕೊಳ್ಳುವ ನಮ್ಮ ಪ್ರಯಾಣವನ್ನು ನಾವು ಮುಂದುವರಿಸೋಣ. ಈ ಭಾಗದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಕಾಲದ ಬ್ರಿಟಿಷ್ ಆರ್ಥಿಕತೆಯ ಅಧ್ಯಯನದ ಆಧಾರದ ಮೇಲೆ ರಾಜಕೀಯ ಆರ್ಥಿಕತೆಯನ್ನು ಹೇಗೆ ಅಭಿವೃದ್ಧಿ ಪಡಿಸಿದರು ಎಂಬುದನ್ನು ಪರಿಶೀಲಿಸೋಣ.

ಯಾವುದೇ ಸಮಾಜದ ಆರ್ಥಿಕ ವ್ಯವಸ್ಥೆಯು ಸಮಾಜದ ಅಡಿಪಾಯವನ್ನು ರೂಪಿಸುತ್ತದೆ ಎಂದು ಮಾರ್ಕ್ಸ್ ನಮಗೆ ಕಲಿಸಿದರು. ಆರ್ಥಿಕ ವ್ಯವಸ್ಥೆಯು ಊಳಿಗಮಾನ್ಯ ಆರ್ಥಿಕ ವ್ಯವಸ್ಥೆಯಾಗಿರುವುದರಿಂದ ನಾವು ಸಮಾಜವನ್ನು ಊಳಿಗಮಾನ್ಯ ಸಮಾಜ ಎಂದು ಕರೆಯುತ್ತೇವೆ. ಆ ಸಮಾಜದ ಆರ್ಥಿಕ ವ್ಯವಸ್ಥೆಯು ಬಂಡವಾಳಶಾಹಿ ಆರ್ಥಿಕತೆಯಾಗಿರುವುದರಿಂದ ನಾವು ಆ ಸಮಾಜವನ್ನು ಬಂಡವಾಳಶಾಹಿ ಸಮಾಜ ಎಂದು ಕರೆಯುತ್ತೇವೆ. ಆರ್ಥಿಕ ವ್ಯವಸ್ಥೆಯ ಈ ತಳಹದಿಯ ಮೇಲೆ ರಾಜಕೀಯ ಮತ್ತು ಸಂಸ್ಕೃತಿ ಸಮಾಜದ ಮೇರು ರಚನೆಯಾಗಿ ನಿಂತಿವೆ. ನಾವು ಆರ್ಥಿಕ ವ್ಯವಸ್ಥೆಯನ್ನು ಅಡಿಪಾಯವಾಗಿ ಚೆನ್ನಾಗಿ ಅರ್ಥಮಾಡಿಕೊಂಡರೆ, ಅದು ಸಮಾಜದ ರಾಜಕೀಯ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಆದ್ದರಿಂದ, ಮಾರ್ಕ್ಸ್ ತಮ್ಮ ಹೆಚ್ಚಿನ ಗಮನವನ್ನು ಆರ್ಥಿಕ ವ್ಯವಸ್ಥೆಯ ಅಧ್ಯಯನಕ್ಕೆ ಮೀಸಲಿಟ್ಟರು. ಮಾರ್ಕ್ಸ್‌ನ ಪ್ರಮುಖ ಕೃತಿ "ದ ಕ್ಯಾಪಿಟಲ್" ಎಂದು ನಮಗೆಲ್ಲರಿಗೂ ತಿಳಿದಿದೆ. "ದ ಕ್ಯಾಪಿಟಲ್", ಆಧುನಿಕ ಬಂಡವಾಳಶಾಹಿಯ ಆರ್ಥಿಕ ವ್ಯವಸ್ಥೆಯ ಅಧ್ಯಯನಕ್ಕೆ ಮೀಸಲಾಗಿದೆ.

ಆ ಸಮಯದಲ್ಲಿ ಇಂಗ್ಲೆಂಡ್ ಬಂಡವಾಳಶಾಹಿ ದೇಶಗಳಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿತ್ತು. ಅರ್ಥಶಾಸ್ತ್ರಜ್ಞರಾದ ಆಡಮ್ ಸ್ಮಿತ್ ಮತ್ತು ಡೇವಿಡ್ ರಿಕಾರ್ಡೊ ಇಂಗ್ಲೆಂಡ್‌ನಲ್ಲಿನ ಆರ್ಥಿಕ ವ್ಯವಸ್ಥೆಯನ್ನು ತನಿಖೆ ಮಾಡಿದರು ಮತ್ತು "ಕಾರ್ಮಿಕ ಆಧಾರಿತ ಮೌಲ್ಯದ ಸಿದ್ಧಾಂತ" ಕ್ಕೆ ಅಡಿಪಾಯ ಹಾಕಿದರು. ಆಡಮ್ ಸ್ಮಿತ್ ಅವರು ಕಾರ್ಮಿಕ ಆಧಾರಿತ ಮೌಲ್ಯದ ಸಿದ್ಧಾಂತವನ್ನು ವಿವರಿಸುವ ಅರ್ಥಶಾಸ್ತ್ರಜ್ಞರಾಗಿದ್ದರು. ಕಾರ್ಮಿಕ ಆಧಾರಿತ ಮೌಲ್ಯದ ಸಿದ್ಧಾಂತದ ಪ್ರಕಾರ, ಶ್ರಮವು ಎಲ್ಲಾ ಸರಕುಗಳಿಗೆ ಮೂಲ ವಿನಿಮಯ ಹಣವಾಗಿತ್ತು. ಆದ್ದರಿಂದ, ಉತ್ಪಾದನೆಯಲ್ಲಿ ಹೆಚ್ಚು ಶ್ರಮವನ್ನು ಬಳಸಿದರೆ, ಸಾಪೇಕ್ಷ ಆಧಾರದ ಮೇಲೆ ಇತರ ವಸ್ತುಗಳ ವಿನಿಮಯದಲ್ಲಿ ಆ ವಸ್ತುವಿನ ಮೌಲ್ಯವು ಹೆಚ್ಚಾಗಿರುತ್ತದೆ. ಸ್ಮಿತ್ ಪ್ರಕಾರ, ಪೆನ್ನು ಅಥವಾ ಬಟ್ಟೆ ಅಥವಾ ಗಡಿಯಾರದಂತಹ ಯಾವುದೇ ಸರಕುಗಳ ಮೌಲ್ಯವು ಸರಕು ಉತ್ಪಾದನೆಯಲ್ಲಿ ಎಷ್ಟು ಶ್ರಮ ಸಮಯವನ್ನು ವ್ಯಯಿಸಲಾಗಿದೆ ಎಂಬುದರ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಸ್ಮಿತ್ ಮತ್ತು ರಿಕಾರ್ಡೊ ಅವರ ವಿಶ್ಲೇಷಣೆಯನ್ನು ಮಾರ್ಕ್ಸ್ ಮುಂದುವರೆಸಿದರು. ಮಾರ್ಕ್ಸ್ "ಶ್ರಮದ ಆಧಾರಿತ ಮೌಲ್ಯದ ಸಿದ್ಧಾಂತ" ವನ್ನು ಸ್ಥಿರವಾಗಿ ಅಭಿವೃದ್ಧಿಪಡಿಸಿದರು. ಪ್ರತಿಯೊಂದು ಸರಕುಗಳ ಮೌಲ್ಯವು ಅದರ ಉತ್ಪಾದನೆಗೆ ವ್ಯಯಿಸಲಾದ ಸಾಮಾಜಿಕವಾಗಿ ಅಗತ್ಯವಾದ ಶ್ರಮದ ಪ್ರಮಾಣದಿಂದ ನಿರ್ಧರಿಸಲ್ಪಡುತ್ತದೆ ಎಂದು ಅವರು ತೋರಿಸಿದರು. ಸಾಮಾಜಿಕವಾಗಿ ಅಗತ್ಯವಾದ ಶ್ರಮದ ಸಮಯದ ಸರಳ ವ್ಯಾಖ್ಯಾನವೆಂದರೆ, ಸರಾಸರಿ ಕೌಶಲ್ಯ ಮತ್ತು ಉತ್ಪಾದಕತೆಯ ಕೆಲಸಗಾರನು ಸರಾಸರಿ ಉತ್ಪಾದಕ ಸಾಮರ್ಥ್ಯದ ಸಾಧನಗಳೊಂದಿಗೆ ಕೆಲಸ ಮಾಡುವ ಮೂಲಕ ನಿರ್ದಿಷ್ಟ ಸರಕುಗಳನ್ನು ಉತ್ಪಾದಿಸುವ ಶ್ರಮದ ಸಮಯ. ಇದು ಕೆಲಸದ ಸಮಯದಲ್ಲಿ "ಸರಾಸರಿ ಯುನಿಟ್ ಶ್ರಮದ ವೆಚ್ಚ" ಆಗಿದೆ.

ಬೂರ್ಜ್ವಾ ಅರ್ಥಶಾಸ್ತ್ರಜ್ಞರು ವಸ್ತುಗಳ ನಡುವಿನ ಸಂಬಂಧವನ್ನು ಕಂಡರು (ಒಂದು ಸರಕು ಇನ್ನೊಂದಕ್ಕೆ ವಿನಿಮಯ). ಮಾರ್ಕ್ಸ್ ಜನರ ನಡುವಿನ ಸಂಬಂಧವನ್ನು ಬಹಿರಂಗಪಡಿಸಿದರು. ಸರಕುಗಳ ವಿನಿಮಯವು ಮಾರುಕಟ್ಟೆಯ ಮೂಲಕ ಪ್ರತ್ಯೇಕ ಉತ್ಪಾದಕರ ನಡುವಿನ ಸಂಪರ್ಕವನ್ನು ವ್ಯಕ್ತಪಡಿಸುತ್ತದೆ. ವೈಯಕ್ತಿಕ ನಿರ್ಮಾಪಕರ ನಡುವಿನ ಸಂಪರ್ಕವು ಹೆಚ್ಚು ಹತ್ತಿರವಾಗುತ್ತಿದೆ ಎಂಬುದನ್ನು ಹಣವು ಸೂಚಿಸುತ್ತದೆ. ಹಣವು ಬೇರ್ಪಡಿಸಲಾಗದಂತೆ ಪ್ರತ್ಯೇಕ ಉತ್ಪಾದಕರ ಸಂಪೂರ್ಣ ಆರ್ಥಿಕ ಜೀವನವನ್ನು ಒಟ್ಟಾರೆಯಾಗಿ ಒಂದುಗೂಡಿಸುತ್ತದೆ. ಬಂಡವಾಳವು ಈ ಸಂಪರ್ಕದ ಮತ್ತಷ್ಟು ಬೆಳವಣಿಗೆಯನ್ನು ಸೂಚಿಸುತ್ತದೆ:

**ಭಾಗ 2** — ಮೊದಲನೆಯ ಭಾಗವು ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿರುತ್ತದೆ

ಮನುಷ್ಯನ ಶ್ರಮಶಕ್ತಿಯು ಒಂದು ಸರಕಾಗುತ್ತದೆ. ಕೂಲಿ ಕಾರ್ಮಿಕನು ತನ್ನ ಶ್ರಮಶಕ್ತಿಯನ್ನು ಜಮೀನುದಾರರಿಗೆ ಮತ್ತು ಕಾರ್ಖಾನೆಯ ಮಾಲೀಕರಿಗೆ ಮಾರುತ್ತಾನೆ. ಕೆಲಸಗಾರನು ದಿನದ ಒಂದು ಭಾಗವನ್ನು ತನ್ನನ್ನು ಮತ್ತು ತನ್ನ ಕುಟುಂಬವನ್ನು ನಿರ್ವಹಿಸುವ ವೆಚ್ಚವನ್ನು ಭರಿಸುತ್ತಾನೆ (ಇದನ್ನು ಕೂಲಿಯಾಗಿ ನೀಡಲಾಗುತ್ತದೆ). ಇಂದು, ಬಹುಪಾಲು ಅಸಂಘಟಿತ ಕಾರ್ಮಿಕರಿಗೆ ವಸತಿ, ಮಕ್ಕಳಿಗೆ ಶಿಕ್ಷಣ, ಆಹಾರ, ಬಟ್ಟೆ, ವೈದ್ಯಕೀಯ ವೆಚ್ಚಗಳು ಮತ್ತು ಮನರಂಜನೆಯ ವಿಷಯದಲ್ಲಿ ಯೋಗ್ಯವಾದ ಜೀವನವನ್ನು ನಡೆಸಲು ಸಾಕಷ್ಟು ಕನಿಷ್ಠ ವೇತನವು ಸಿಗುತ್ತಿಲ್ಲ ಎಂದು ನಮಗೆ ತಿಳಿದಿದೆ. ದಿನದ ಎರಡನೇ ಭಾಗದಲ್ಲಿ ಕೆಲಸಗಾರನು ಪ್ರತಿಫಲವಿಲ್ಲದೆ ಕೆಲಸ ಮಾಡುತ್ತಾನೆ, ಬಂಡವಾಳಗಾರನಿಗೆ ಹೆಚ್ಚುವರಿ ಮೌಲ್ಯವನ್ನು ಸೃಷ್ಟಿಸುತ್ತಾನೆ. ಈ ಹೆಚ್ಚುವರಿ ಮೌಲ್ಯವು ಲಾಭದ ಮೂಲವಾಗಿದೆ ಮತ್ತು ಬಂಡವಾಳಶಾಹಿ ವರ್ಗದ ಸಂಪತ್ತಿನ ಮೂಲವಾಗಿದೆ. ಇದು ಬಂಡವಾಳಶಾಹಿಗಳಿಂದ ಕಾರ್ಮಿಕರ ಶೋಷಣೆಯ ಮೂಲವಾಗಿದೆ. ಇದರರ್ಥ ಬಂಡವಾಳಶಾಹಿಯು ಕೆಲಸಗಾರನ ಶ್ರಮದ ಸಮಯದ ಒಂದು ಭಾಗವನ್ನು ಕದಿಯುತ್ತಾನೆ.

ಹೆಚ್ಚುವರಿ ಮೌಲ್ಯದ ಸಿದ್ಧಾಂತವು ಮಾರ್ಕ್ಸ್ ಅವರ ಆರ್ಥಿಕ ಸಿದ್ಧಾಂತದ ಮೂಲಾಧಾರವಾಗಿದೆ.

ಪೆನ್ನಂತಹ ಯಾವುದೇ ವಸ್ತುವನ್ನು ಉತ್ಪಾದಿಸಲು ನಮಗೆ ಕಚ್ಚಾ ಸಾಮಗ್ರಿಗಳು, ಯಂತ್ರೋಪಕರಣಗಳು, ವಿದ್ಯುತ್, ಕಟ್ಟಡ ಮತ್ತು ಅಂತಿಮವಾಗಿ ಕಾರ್ಮಿಕರ ಅಗತ್ಯವಿದೆ. ಯಂತ್ರೋಪಕರಣಗಳು, ವಿದ್ಯುತ್ ಮತ್ತು ಕಟ್ಟಡಗಳನ್ನು ಉತ್ಪಾದಿಸಲು ನಮಗೆ ಕಚ್ಚಾ ವಸ್ತುಗಳು ಮತ್ತು ಕಾರ್ಮಿಕರ ಅಗತ್ಯವಿದೆ. ಆದ್ದರಿಂದ, ಯಾವುದೇ ಸರಕುಗಳ ಮೌಲ್ಯವು ಕಾರ್ಮಿಕ ಶಕ್ತಿಯಿಂದ ಉತ್ಪತ್ತಿಯಾಗುತ್ತದೆ. ಬಂಡವಾಳಗಾರನು ಪಾವತಿಸುವ ಕೂಲಿಯು ಕಾರ್ಮಿಕನು ಉತ್ಪಾದಿಸಿದ ಮೌಲ್ಯದ ಒಂದು ಭಾಗಕ್ಕೆ ಮಾತ್ರ. ಕೆಲಸಗಾರನ ಶ್ರಮಶಕ್ತಿಯನ್ನೇ ಸರಕಿನ ವಸ್ತುವಾಗಿ ಪರಿಗಣಿಸಿ ಕಾರ್ಮಿಕನು ತನ್ನ

ಶ್ರಮಶಕ್ತಿಯನ್ನು ಬಂಡವಾಳಶಾಹಿಗೆ ಮಾರುತ್ತಾನೆ. ಶ್ರಮಶಕ್ತಿಯ ಎರಡನೇ ಭಾಗವನ್ನು ಬಂಡವಾಳಶಾಹಿಗಳು ಲಾಭವಾಗಿ ಇಟ್ಟುಕೊಂಡಿದ್ದಾರೆ. ಆ ಲಾಭವನ್ನು ಬಳಸಿಕೊಂಡು ಬಂಡವಾಳಗಾರ ಬಂಡವಾಳವನ್ನು ಸಂಗ್ರಹಿಸುತ್ತಾನೆ. ಕಾರ್ಮಿಕರ ಶ್ರಮದಿಂದ ಉತ್ಪತ್ತಿಯಾಗುವ ಬಂಡವಾಳ ಬಂಡವಾಳಶಾಹಿಗಳಿಗೆ ಪ್ರಚಂಡ ಶಕ್ತಿಯನ್ನು ನೀಡುತ್ತದೆ. ಆ ಅಧಿಕಾರವನ್ನು ಬಂಡವಾಳಶಾಹಿ ಬಳಸಿಕೊಂಡು ಕಾರ್ಮಿಕನನ್ನು ತುಳಿಯುತ್ತಾನೆ. ಬಂಡವಾಳಶಾಹಿ ಸಣ್ಣ ಪ್ರಮಾಣದ ಉತ್ಪಾದನೆಯನ್ನು ನಾಶಪಡಿಸುತ್ತದೆ ಮತ್ತು ಏಕಸ್ವಾಮ್ಯವನ್ನು ಸ್ಥಾಪಿಸುತ್ತದೆ.

ಉತ್ಪಾದನೆಯೇ ಹೆಚ್ಚು ಹೆಚ್ಚು ಸಾಮಾಜಿಕವಾಗುತ್ತದೆ. ನಿಯಮಿತ ಆರ್ಥಿಕ ಜೀವಿಯಲ್ಲಿ ಲಕ್ಷಾಂತರ ಕಾರ್ಮಿಕರು ಒಟ್ಟಿಗೆ ಬಂಧಿತರಾಗುತ್ತಾರೆ. ಆದರೆ ಈ ಸಾಮೂಹಿಕ ಶ್ರಮದ ಉತ್ಪನ್ನವನ್ನು ಬೆರಳೆಣಿಕೆಯಷ್ಟು ಬಂಡವಾಳಶಾಹಿಗಳು ಸ್ವಾಧೀನಪಡಿಸಿಕೊಳ್ಳುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯು ತನ್ನದೇ ಆದ ಆವರ್ತಕ ಬಿಕ್ಕಟ್ಟಿನ ಚಕ್ರವನ್ನು ಹಾದುಹೋಗುತ್ತದೆ ಎಂದು ಮಾರ್ಕ್ಸ್ ಗಮನಿಸಿದರು.

ಬಂಡವಾಳದ ಮೇಲೆ ಕಾರ್ಮಿಕರ ಅವಲಂಬನೆಯನ್ನು ಹೆಚ್ಚಿಸುವ ಮೂಲಕ, ಬಂಡವಾಳಶಾಹಿ ವ್ಯವಸ್ಥೆಯು ಐಕ್ಯ ಕಾರ್ಮಿಕರ ಮಹಾನ್ ಶಕ್ತಿಯನ್ನು ಸೃಷ್ಟಿಸುತ್ತದೆ. ಬಂಡವಾಳಶಾಹಿಯೇ ಬಂಡವಾಳಶಾಹಿಯನ್ನು ನಾಶಮಾಡುವ ಶಕ್ತಿಯನ್ನು ಸೃಷ್ಟಿಸುತ್ತದೆ. ಆ ಶಕ್ತಿ ದುಡಿಯುವ ವರ್ಗ.

ಎಲ್ಲಾ ಬಂಡವಾಳಶಾಹಿ ದೇಶಗಳ ಅನುಭವವು ಹೆಚ್ಚುತ್ತಿರುವ ಕಾರ್ಮಿಕರಿಗೆ ಈ ಮಾರ್ಕ್ಸಿಯನ್ ಸಿದ್ಧಾಂತದ ಸತ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಬಂಡವಾಳಶಾಹಿಯು ಪ್ರಪಂಚದಾದ್ಯಂತ ಜಯಗಳಿಸಿದೆ, ಆದರೆ ಈ ವಿಜಯವು ಬಂಡವಾಳದ ಮೇಲಿನ ಶ್ರಮದ ವಿಜಯಕ್ಕೆ ಮುನ್ನುಡಿಯಾಗಿದೆ.

★ **ಪಿ ಆರ್ ಎಸ್ ಮಣಿ**

# ಬೆಂಗಳೂರಿನ ಐಟಿಐ ಲಿಮಿಟೆಡ್ ಕಾರ್ಮಿಕರ ಅಹೋರಾತ್ರಿ ಹೋರಾಟ

ಐಟಿಐ ಲಿಮಿಟೆಡ್ ಭಾರತ ಸರ್ಕಾರದ ಸಂವಹನ ಸಚಿವಾಲಯದ ಅಡಿಯಲ್ಲಿ ಬರುವ ಸಾರ್ವಜನಿಕ ವಲಯದ ಉದ್ಯಮವಾಗಿದೆ. ಕಳೆದ 3-35 ವರ್ಷಗಳಿಂದಲೂ ಕಾರ್ಮಿಕರು ಐಟಿಐನ ಶಾಶ್ವತ ಸ್ವರೂಪದ ಕೆಲಸಗಳನ್ನು ಮಾಡುತ್ತಿದ್ದರು ಸಹ, ಆ ಕಾರ್ಮಿಕರಿಗೆ ಗುತ್ತಿಗೆ ಕಾರ್ಮಿರೆಂಬ ಹಣೆಪಟ್ಟಿಯನ್ನು ಕಟ್ಟಲಾಗಿದೆ ಮತ್ತು ಕಾನೂನುಬದ್ಧ ಹಕ್ಕುಗಳಿಂದ ವಂಚಿಸಲಾಗಿದೆ. ಈ ಕಾರ್ಮಿಕರು ಐಟಿಐ ಲಿಮಿಟೆಡ್‌ನ ಶಾಶ್ವತ ಸ್ವರೂಪ ಮತ್ತು ಪ್ರಮುಖ ಕೆಲಸಗಳಾದ ತಾಂತ್ರಿಕ ಕೆಲಸಗಳು, ಗುಣಮಟ್ಟದ ಭರವಸೆ, ಗುಣಮಟ್ಟದ ಪರೀಕ್ಷೆ, ಲ್ಯಾಬ್ ಸಹಾಯಕರು, ಡೇಟಾ ಎಂಟ್ರಿ, ಹಣಕಾಸು, ಚಾಲಕರು, ಕಚೇರಿ ಸಹಾಯಕರು ಇತರ ವಿಭಾಗಗಲ್ಲಿ ಕೆಲಸವನ್ನು ನಿರ್ವಹಿಸುತ್ತಾರೆ. ಈ ಕಾರ್ಮಿಕರಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ದಲಿತ ಸಮುದಾಯಕ್ಕೆ ಸೇರಿದ್ದು, 35 ವರ್ಷಗಳಿಂದ ದುಡಿಯುತ್ತಿರುವ ಹಲವಾರು ಮಹಿಳಾ ಕಾರ್ಮಿಕರು ಸಹ ಇದ್ದಾರೆ.

ಐಟಿಐ ಲಿಮಿಟೆಡ್ ಹಲವಾರು ದೇಶದ ಭದ್ರತೆ ಮತ್ತು ರಕ್ಷಣೆಗೆ ಸಂಬಂಧಿಸಿದ ಯೋಜನೆಗಳನ್ನು ನಿರ್ವಹಿಸುತ್ತಿದೆ. ಈ ಯೋಜನೆಗಳಲ್ಲಿ ಈ ಕಾರ್ಮಿಕರು ಪ್ರಮುಖ ಕೆಲಸಗಳನ್ನು ನಿರ್ವಹಿಸುತ್ತಾರೆ ಜೊತೆಗೆ ಭಾರತೀಯ ಸೈನದ ಜೊತೆ ಅಡ್ವಾನ್ಸಡ್ ಡೇಟಾ ಪ್ರೊಸೆಸ್ಸಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್ (ಎ.ಡಿ.ಪಿ.ಆರ್.ಐ), ಡಿಫೆನ್ಸ್ ಕಮ್ಯೂನಿಕೇಷನ್ ನೆಟವರ್ಕ್, ಆರ್ಮಿ ಸ್ಟ್ಯಾಟಿಕ್ ಸ್ವಿಚ್ಡ್ ಕಮ್ಯೂನಿಕೇಷನ್ ನೆಟವರ್ಕ್ (ಎಎಸ್‌ಸಿಎಎನ್) ಯೋಜನೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕಾರ್ಮಿಕರು ಐಟಿಐ ನಿರ್ವಹಿಸುವ ಇಂತಹ ಹಲವಾರು ಸೂಕ್ಷ್ಮ ಮತ್ತು ರಕ್ಷಣಾ ಸಂಬಂಧಿತ ಯೋಜನೆಗಳಲ್ಲಿ ವಿವಿಧ ಸಾಧನಗಳ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಕಾರ್ಯರೂಪಕ್ಕೆ ತರುವ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಈ ಕಾರ್ಮಿಕರನ್ನು ದೇಶದ ಗಡಿಗಳಿಗೂ ಸಹ ಆನ್-ಸೈಟ್ ರಕ್ಷಣಾ ಕಾರ್ಯಯೋಜನೆಗಳಲ್ಲಿ ತಾಂತ್ರಿಕ ಸಹಾಯ ಮಾಡುವುದಕ್ಕೆ ಕಳುಹಿಸಲಾಗಿತ್ತು. ಕಳೆದ ವರ್ಷ ಕೋವಿಡ್-19 ಸಾಂಕ್ರಾಮಿಕ ರೋಗದ ಮೊದಲ ಅಲೆಯ ಸಮಯದಲ್ಲಿ ಫೇಸ್‌ಶೀಲ್ಡ್ ಉತ್ಪಾದನೆಯಲ್ಲಿ ಈ ಕಾರ್ಮಿಕರು ಭಾಗಿಯಾಗಿದ್ದರು.

ಕೋವಿಡ್ ಸಾಂಕ್ರಾಮಿಕದ ಕಾಲದಲ್ಲಾದ ಮೊದಲ ಲಾಕ್‌ಡೌನ್‌ನ ಸಮಯದಲ್ಲಿ ಐಟಿಐ ಲಿಮಿಟೆಡ್ ಹಲವಾರು ಕಾರ್ಮಿಕರಿಗೆ ಏಕಪಕ್ಷಿಯವಾಗಿ ಮತ್ತು ಕಾನೂನುಬಾಹಿರವಾಗಿ ಕೆಲಸ ನಿರಾಕರಿಸಿತು, ಇಂತಹ ಹಲವಾರು ಕಾರ್ಮಿಕ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಐಟಿಐ ಆಡಳಿತ ಮಂಡಳಿಯ ವಿರುದ್ಧ ಕಾರ್ಮಿಕರು ಒಟ್ಟಾಗಿ ಸೇರಿ 'ಕರ್ನಾಟಕ ಜನರಲ್ ಲೇಬರ್ ಯೂನಿಯನ್ (ಐಟಿಐ ಘಟಕ)' ಸಂಘಟನೆ ಕಟ್ಟಿದರು ಮತ್ತು ತಮ್ಮ ನ್ಯಾಯಸಮ್ಮತ ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಹಲವಾರು ಕೈಗಾರಿಕಾ ವಿವಾದಗಳನ್ನು ಪ್ರಾದೇಶಿಕ ಕಾರ್ಮಿಕ ಆಯುಕ್ತರ ಮುಂದೆ ದಾಖಲು ಮಾಡಿದರು.

ಡಿಸೆಂಬರ್ 1, 2021 ರಂದು, ಕಾರ್ಮಿಕ ಸಂಘಟನೆಯಲ್ಲಿ ಸದಸ್ಯರಾಗಿದ್ದ ಮತ್ತು ಕೈಗಾರಿಕಾ ವಿವಾದಗಳನ್ನು ಎತ್ತಿದ 80 ಕಾರ್ಮಿಕರಿಗೆ ಕಾನೂನುಬಾಹಿರವಾಗಿ ಕೆಲಸ ನಿರಾಕರಿಸಲಾಯಿತು. ಈಗಾಗಲೇ ಪ್ರಾದೇಶಿಕ ಕಾರ್ಮಿಕ ಆಯುಕ್ತರ ಮುಂದೆ ದಾಖಲು ಮಾಡಿದ್ದ ಕೈಗಾರಿಕಾ ವಿವಾದಗಳಲ್ಲಿ, ಐಟಿಐ ಲಿಮಿಟೆಡ್ ಕೈಗಾರಿಕಾ ವಿವಾದಗಳ ಕಾಯಿದೆ, 1947 ರ ಕಲಂ 33 ಅನ್ನು ಪಾಲಿಸುವಂತೆ ಮತ್ತು ವಿವಾದಕ್ಕೆ ಸಂಬಂಧಿಸಿದ ಕಾರ್ಮಿಕರ ಸೇವಾ ಷರತ್ತುಗಳನ್ನು ಬದಲಾಯಿಸಬಾರದೆಂದು ಪ್ರಾದೇಶಿಕ ಕಾರ್ಮಿಕ ಆಯುಕ್ತರು ನಿರ್ದಿಷ್ಟ ಸಲಹೆ ಮತ್ತು ಸೂಚನೆಯನ್ನು ನೀಡಿದ್ದರು. ಇದರ ಹೊರತಾಗಿಯೂ ಐಟಿಐ ಆಡಳಿತ ಮಂಡಳಿ ಈ ಕಾರ್ಮಿಕರಿಗೆ ಕೆಲಸ ನಿರಾಕರಿಸಿದೆ.

ಕಾರ್ಮಿಕರು ಸಂಘಟನೆ ಕಟ್ಟಿ, ತಮ್ಮ ಕಾನೂನುಬದ್ಧ ಹಕ್ಕುಗಳಿಗಾಗಿ ಕೈಗಾರಿಕಾ ವಿವಾದಗಳನ್ನು ದಾಖಲು ಮಾಡಿರುವುದೇ, ಕಾರ್ಮಿಕರಿಗೆ ಉದ್ಯೋಗವನ್ನು ನಿರಾಕರಿಸಲು ಏಕೈಕ ಕಾರಣವಾಗಿದೆ. ಐಟಿಐ ಲಿಮಿಟೆಡ್‌ನ ಈ ಕ್ರಮವು ಕಾನೂನುಬಾಹಿರ ಮತ್ತು ಕಾರ್ಮಿಕ ವಿರೋಧಿ ಚಟುವಟಿಕೆಯಾಗಿದೆ. ಇಂತಹ ಕ್ರಮವನ್ನು ಕಾನೂನು ನಿಷೇಧಿಸಿದೆ ಮತ್ತು ಇದು ಶಿಕ್ಷಾರ್ಹವಾಗಿದೆ. ಐಟಿಐ ತನ್ನ ಕಾನೂನು ಬಾಹಿರ ಕ್ರಮದ ಮೂಲಕ ಈ ಕಾರ್ಮಿಕರನ್ನು ಮತ್ತು ಅವರ ಕುಟುಂಬವರ್ಗವನ್ನು ಬೀದಿಪಾಲು ಮಾಡಿದೆ.

ಈ ಕಾರ್ಮಿರು ಐಟಿಐನ ಪ್ರಮುಖ ಮತ್ತು ದೀರ್ಘಕಾಲಿಕ ಕೆಲಸವನ್ನು ನಿರ್ವಹಿಸುತ್ತಿದ್ದಾಗ್ಯೂ ಸಹ ಐಟಿಐನ ಕುತಂತ್ರದಿಂದಾಗಿ ಖಾಯಂ ಕಾರ್ಮಿಕರ ಸ್ಥಾನದಿಂದ ಮತ್ತು ಶಾಸನಬದ್ಧ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಈ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವ ಅವಧಿಯಲ್ಲಿ ಗುತ್ತಿಗೆದಾರರು ಬಂದು ಹೋಗಿದ್ದಾರೆ ಆದರೆ ಈ ಕಾರ್ಮಿಕರು ಮಾತ್ರ ತಮ್ಮ ಸೇವಾ ಷರತ್ತಿನಲ್ಲಿ ಯಾವುದೇ ಬದಲಾವಣೆಯಿಲ್ಲದೆ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ಕಾರ್ಮಿಕರು ಐಟಿಐಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ ಮತ್ತು ರಾಷ್ಟ್ರದ ಭದ್ರತೆಗಾಗಿ ಭಾರತ ಸೇನೆಯ ರಕ್ಷಣೆ ವಿಭಾಗದ ಹಲವು ಕೆಲಸಗಳ ಭಾಗವಹಿಸಿದ್ದಾರೆ.

ಐಟಿಐ ಲಿಮಿಟೆಡ್‌ನ ಕಾನೂನುಬಾಹಿರ ಕ್ರಮದ ವಿರುದ್ಧ ದಿನಾಂಕ 01.12.2021 ರಿಂದ ಕಾರ್ಮಿಕರೆಲ್ಲರೂ ಐಟಿಐ ಲಿಮಿಟೆಡ್‌ನ ಹೊರಗೆ ಕುಳಿತು ಅಹೋರಾತ್ರಿ ಪ್ರತಿಭಟನೆ ಮಾಡುತ್ತಿದ್ದು ಸೇವಾ ನಿರಂತರತೆ ಜೊತೆಗೆ ಮರುಳಿ ಉದ್ಯೋಗ ನೀಡುವಂತೆ ಮತ್ತು ಕಾರ್ಮಿಕ ವಿರೋಧಿ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ಐಟಿಐಯನ್ನು ಒತ್ತಾಯಿಸುತ್ತಿದ್ದಾರೆ.

ಈ ಕಾರ್ಮಿಕರ ಅಹೋರಾತ್ರಿ ಹೋರಾಟಕ್ಕೆ ಪೌರಕಾರ್ಮಿಕರು, ಆಸ್ಪತ್ರೆಯ ಕಾರ್ಮಿಕರು, ಇತರೆ ಸಾರ್ವಜನಿಕ ವಲಯದ ಗುತ್ತಿಗೆ ಕಾರ್ಮಿಕರು, ದಲಿತ ಸಂಘಟನೆಗಳು ಮತ್ತು ಸಂಯುಕ್ತ ಹೋರಾಟದ ಸಂಘಟನೆಗಳು ಸೇರಿದಂತೆ ಎಲ್ಲ ಕಡೆಯಿಂದ ಬೆಂಬಲ ಸಿಕ್ಕಿದೆ. ಈ ಕಾರ್ಮಿಕರ ಹೋರಾಟವು ಕೇವಲ ಐಟಿಐ ಲಿಮಿಟೆಡ್‌ನ ಕಾರ್ಮಿಕರ ಸೇವೆಯ ಹೊರತಾಗಿಯೂ "ಗುತ್ತಿಗೆ ಕಾರ್ಮಿಕರು" ಎಂದು ಕರೆಯಲ್ಪಡುವ ಮತ್ತು ಅವರ ಹಕ್ಕುಗಳಿಂದ ವಂಚಿತರಾಗಿರುವ ವಿವಿಧ ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಮಿಕರ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಹೆಚ್‌ಎಎಲ್, ಬಿಹೆಚ್‌ಇಎಲ್, ಬಿಇಎಂಎಲ್ ಸೇರಿದಂತೆ ವಿವಿಧ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ಈ ಮಾದರಿಯಲ್ಲೇ ನೇಮಿಸಿಕೊಳ್ಳುತ್ತಾರೆ ಮತ್ತು ಅವರ ಮೂಲಭೂತ ಹಕ್ಕುಗಳನ್ನು ನಿರಾಕರಿಸುತ್ತಾರೆ.

ಖಾಸಗೀ ವಲಯದ ಉದ್ಯಮಗಳಿಗೆ ಮಾದರಿಯಾಗಿರಬೇಕಾದ ಸಾರ್ವಜನಿಕ ವಲಯ ಉದ್ಯಮವು, ವಾಸ್ತವವಾಗಿ ಕಾರ್ಮಿಕ ಕಾನೂನನ್ನು ದೊಡ್ಡ ಮಟ್ಟದಲ್ಲಿ ಉಲ್ಲಂಘಿಸುತ್ತಿದೆ.

ಸರ್ವೋಚ್ಚ ನ್ಯಾಯಾಲದ ಅಭಿಪ್ರಾಯದಂತೆ ಗುತ್ತಿಗೆ ವ್ಯವಸ್ಥೆಯು ಸುಧಾರಿತ ರೂಪದ ಜೀತ ಪದ್ಧತಿಯೇ ಹೊರತುಪಡಿಸಿ ಬೇರೇನೂ ಅಲ್ಲ ಮತ್ತು ಅದನ್ನೇ ಜೀವಂತವಾಗಿಸದೆ. ಗುತ್ತಿಗೆ ಕಾರ್ಮಿಕರನ್ನು ಕರ್ಖಾನೆಯ 'ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ' ಬಳಸಿಕೊಳ್ಳಲು ನಿಷೇಧ ವಿರುವುದರಿಂದ, ಇತ್ತೀಚಿನ ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆಯು, 'ಪ್ರಮುಖ ಕಾರ್ಯ ಚಟುವಟಿಕೆಗಳ' ಅರ್ಥವ್ಯಾಪ್ತಿಯಲ್ಲಿ ನೈರ್ಮಲ್ಯ, ಕಾವಲುಗಾರರ ಕೆಲಸ ಸೇರಿದಂತೆ ಇತರೆ ಕೆಲಸಗಳನ್ನು ಹೊರತು ಪಡಿಸಲಾಗಿದೆ ಎಂದು ಹೇಳುವ ಮೂಲಕ ಈ ಅತ್ಯಂತ ಶೋಷಣೆಯ ವ್ಯವಸ್ಥೆಯನ್ನು ಜೀವಂತವಾಗಿರಿಸಿದೆ. ಇಂತಹ ನಿಕೃಷ್ಟ ಪದ್ದತಿಗಳ ವಿರುದ್ಧ ಗಂಭೀರ ಕ್ರಮಕೈಗೊಳ್ಳಲು ಮತ್ತು ಗುತ್ತಿಗೆ ಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆ ಎಲ್ಲಾರು ಒಗ್ಗಟ್ಟಾಗಿ ಹೋರಾಟ ಮಾಡುವುದು ಇಂದು ತುಂಬಾ ಅಗತ್ಯವಾಗಿದೆ.

★ **ಮೈತ್ರೇಯಿ ಕೃಷ್ಣನ್**




**ಸಂಘಟನೆ ಮಾಡಿದ್ದ ಕಾರಣ ಕಾನೂನು ಬಾಹಿರವಾಗಿ 80 ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿರುವ ಕುರಿತು ಐಟಿಐ ಕಾರ್ಮಿಕರು 100 ದಿನಗಳಿಗೂ ಹೆಚ್ಚು ಪ್ರತಿಭಟನೆಯಲ್ಲಿ ಕುಳಿತಿದ್ದಾರೆ. ಕಾರ್ಮಿಕರು ಉಪವಾಸ ಸತ್ಯಾಗ್ರಹವನ್ನೂ ಸಹ ನಡೆಸಿದರು**

# ಮಹಿಳೆಯ ವಿವಾಹದ ಕನಿಷ್ಟ ವಯಸ್ಸು ಮತ್ತು ರಕ್ಷಣೆ

ಕೇಂದ್ರ ಸಚಿವ ಸಂಪುಟವು ಮಹಿಳೆಯರ ವಿವಾಹದ ಕನಿಷ್ಟ ವಯಸ್ಸನ್ನು 18 ರಿಂದ 21 ವರ್ಷಗಳಿಗೆ ಹೆಚ್ಚಿಸುವ ಸಲುವಾಗಿ ತಿದ್ದುಪಡಿ ಮಸೂದೆಯೊಂದನ್ನು ಮುಂದಿಟ್ಟಿದೆ. ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದ್ದು, ಅದನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ನೀಡಲಾಗಿದೆ. ಇದರ ಸಾಧಕ - ಬಾದಕಗಳನ್ನು ಇಲ್ಲಿ ಅನಾವರಣ ಗೂಳಿಸಲಾಗಿದೆ.

ಸಮಾಜದಲ್ಲಿ ಬಾಲ್ಯ ವಿವಾಹ ಮಾಮೂಲಿ ಪದ್ಧತಿ ಆಗಿದ್ದ ಕಾಲದಿಂದಲೂ, ಬಾಲ ವಿವಾಹ ನಿಗ್ರಹ ಕಾಯ್ದೆಯ ನಡೆ ಹೀಗಿವೆ: 'ಶಾರದಾ ಕಾಯ್ದೆ', 1929ರ ಅಡಿ ಹುಡುಗಿಗೆ 14 ಮತ್ತು ಹುಡುಗನಿಗೆ 18 ವಯಸ್ಸು ನಿಗಧಿ ಪಡಿಸಲಾಗಿತ್ತು. ಅಂದು ಇದರ ಅಡಿ ಮುಸ್ಲಿಂ ಸಮುದಾಯವನ್ನು ಹೊರತು ಪಡಿಸಲಾಗಿತ್ತು. 1949ರಲ್ಲೀ ಮತ್ತು 1978ರಲ್ಲೀ ಹುಡುಗಿ ವಯಸ್ಸನ್ನು ಕ್ರಮವಾಗಿ 15 ಮತ್ತು 18ಕ್ಕೆ ಏರಿಸಲಾಯಿತು. ಹುಡುಗನ ವಯಸ್ಸನ್ನು 21ಕ್ಕೆ ನಿಗಧಿ ಪಡಿಸಲಾಗಿತ್ತು. ಇನ್ನು ಎಲ್ಲಾ ಭಾರತೀಯರಿಗೆ ಅನ್ವಯಿಸು ವಂತೆ 'ಬಾಲ್ಯ ವಿವಾಹ ನಿಷೇಧ ಕಾಯ್ದೆ 2006' ರಲ್ಲಿ ಹುಡುಗಿ ವಿವಾಹ ವಯಸ್ಸು 18 ಮತ್ತು ಹುಡುಗನಿಗೆ 21 ಎಂದೂ ನಿಗಧಿ ಪಡಿಸಲಾಗಿದೆ.

ಇಂದು ಬಾಲ್ಯ ವಿವಾಹ ಕಡಿಮೆ ಮಾಡುವಲ್ಲಿ ಹುಡುಗಿ ವಯಸ್ಸು 18 ಮಿತಿ ಇಂದಾಗಿ ಸಹ ಪ್ರಗತಿ ಸ್ಥಿರವಾದ ಗತಿ ಹೊಂದಿದೆ, ಆದರೆ ಗುರಿಸಾಧಿಸುವಲ್ಲಿ ಹಿಂದುಳಿದು ಬಿಟ್ಟಿದೆ. ರಾಷ್ಟ್ರ ದಲ್ಲಿ ಬಾಲ್ಯ ವಿವಹ ಪರಿಣಾಮ, 1970 ಯಲ್ಲಿ ಶೇಖಡಾ 75% ಇದಿದ್ದು 2020 ಕ್ಕೆ 23.3% ಗೆ ಇಳಿದಿದೆ. ಇನ್ನು ಹದಿ ಹರೆಯದ ಫಲವತ್ತತೆ ಪ್ರಮಾಣ ಸಹ 51 (15-19 ವರ್ಷದ ಬಾಲೆಯರಲ್ಲಿ) ಇದಿದ್ದು 41ಕ್ಕೆ (2019-20) ಕುಸಿದಿದೆ.

**ಭಾರತ ವಿಶಾಲ ದೇಶ, ವೈವಿಧ್ಯತೆಯಿಂದ ಕೂಡಿದೆ:** ಅಭಿವೃದ್ಧಿ ಮಾಪಕವು ಸಹ - ಯುಪಿ, ಬಿಹಾರ, ರಾಜಸ್ತಾನ, ಛತಿಸ್ ಘಡ ರಾಜ್ಯಗಳಲ್ಲಿ ತೀರಾ ಕಡಮೆ ಇದ್ದರೆ, ಕೇರಳ, ಕಾಶ್ಮೀರ, ಪುದುಚೇರಿ ರಾಜ್ಯಗಳಲ್ಲಿ ಇದು ತುಂಬಾ ಹೆಚ್ಚಿದೆ. ಇಂದು ಅಭಿವೃದ್ಧಿಗೆ ಕಾರಣ ವಾದ ಮಾಪಕ ಗಳಾದ ಸಾರ್ವಜನಿಕ ಶಿಕ್ಷಣ, ಕುಟುಂಬ ಆರೋಗ್ಯ ಸೌಲಭ್ಯ, ಪೌಷ್ಟಿಕ ಆಹಾರ, ಎಲ್ಲರಿಗೂ ಕೆಲಸ ಇಂತಹ ಸಬಲೀಕರಣ ಯೋಜನೆ ಗಳನ್ನು ಬಲ ಪಡಿಸ ಬೇಕು.

ಪ್ರಭುತ್ವದ ಅಥವ ವಯಸ್ಕನಾಗುವ ಬಗ್ಗೆ ನಮ್ಮ ಕಾನೂನುಗಳು ಅಂದರೆ - ಭಾರತೀಯ ಮಜೋರಿಟಿ ಆಕ್ಟ್ , ಕಾನೂನು ಆಯೋಗ , ಶಿಕ್ಷಣದ ಹಕ್ಕು ಮತ್ತು ಸಿಇಡಿಡಬ್ಲ್ಯೂಎ (CEDWA) ಅಂತಾರಾಷ್ಟ್ರೀಯ ಸಂಸ್ಥೆ, ಈ ಎಲ್ಲಾ ಆಕ್ಟ್ ಗಳು ಸಹ 18 ವರ್ಷಕ್ಕೆ ಗಂಡು ಮತ್ತು ಹೆಣ್ಣು ಪ್ರಭುತ್ತತೆ ಹೊಂದುತ್ತಾರೆ ಎಂದು ಧೃಡೀ ಕರಿಸಿವೆ. ಇನ್ನು ಒಬ್ಬ ಪ್ರಜೆ 18 ವಯಸ್ಸಿಗೆ ಸರ್ಕಾರಗಳನ್ನು ಚುನಾಯಿಸುವಷ್ಟು ವಯೋಮಾನ ದವರಾಗಿದ್ದ ಪಕ್ಷದಲ್ಲಿ ಅವರಿಗೆ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡುವ ವಯಸ್ಸೂ ಇದೇ ಆಗಿದೆ ಎಂದೇ ಅರ್ಥ ಅಲ್ಲವೇ ? ಅವರು ದೇಶದ ಭವಿಷ್ಯದ ಬಗ್ಗೆ ನಿರ್ಣಯ ಕೈಗೊಳ್ಳುವ ಹಕ್ಕು ಹೊಂದಿರುವವರಾದರೆ, ತಮ್ಮದೇ ಭವಿಷ್ಯದ ಬಗ್ಗೆ ನಿರ್ಣಯ ಕೈಗೊಳ್ಳುವ ಹಕ್ಕನ್ನೂ ಹೊಂದಿರುತ್ತಾರೆ ಅಲ್ಲವೇ? ಪುರುಷರಿಗೆ ಮತ್ತು ಮಹಿಳೆಯರಿಗೆ ಅಂದರೆ ಇಬ್ಬರಿಗೆ ವಿವಾಹದ ವಯಸ್ಸನ್ನು 18 ವರ್ಷಕ್ಕೆ ನಿಗಧಿಪಡಿಸಲು ನಾವು ಆಗ್ರಹಿಸಬೇಕಿದೆ.

ಈಗ ಚಾಲ್ತಿಯಲ್ಲಿರುವ ಕಾನೂನಿನನ್ವಯ 18 ವರ್ಷ ಮದುವೆಯಾಗಬಹುದಾದ ಕನಿಷ್ಟ ವಯೋಮಿತಿಯಾಗಿದ್ದು, ಇದಕ್ಕೂ ಮುನ್ನ ಆಗುವ ವಿವಾಹಗಳನ್ನು ಬಾಲ್ಯವಿವಾಹ ಎಂದೇ ಪರಿಗಣಿಸಲಾಗುತ್ತದೆ ಮತ್ತು ಈ ತಪ್ಪಿಗಾಗಿಯೇ ಆಕೆಯ ಪೋಷಕರನ್ನು ಮತ್ತು ಪತಿಯನ್ನು ಜೈಲು ಶಿಕ್ಷೆಗೊಳಪಡಿಸ ಬಹುದಾಗಿರುತ್ತದೆ. ವಿವಾಹದ ಅಪರಾಧೀಕರಣವನ್ನು ಒಪ್ಪಲಾಗುವುದಿಲ್ಲ; ಆದರೆ ಇಂದು 21 ವಯಸ್ಸಿಗೂ ಮುನ್ನ ವಿವಾಹವನ್ನು ನಿಷೇಧಿಸುವುದರಿಂದ, ಈ ವಯಸ್ಸಿಗೆ ಮುನ್ನವೇ ವಿವಾಹವಾಗಲು ಬಯಸುವ ಭಾರತದ ಅಸಂಖ್ಯಾತ ಹೆಣ್ಣುಮಕ್ಕಳು ಸಂಕೋಲೆಯಲ್ಲಿ ಸಿಕ್ಕಿ ಸಲಾಗುತ್ತದೆ. ಆದರೆ ಈ ಕಾನೂನಿನಡಿ 18 ರಿಂದ 21 ವಯಸ್ಸಿನ ನಡುವೆ ಮಹಿಳೆಯು ವಿವಾಹವಾದರೆ ಆಕೆಯ ಪತಿಯನ್ನು ಮತ್ತು ಪೋಷಕರನ್ನು ಬಂಧಿಸುವುದನ್ನು ಮತ್ತು ಅಪರಾಧೀಕರಣವನ್ನು ನಾವು ಒಪ್ಪಲಾಗುವುದಿಲ್ಲ. ಇದು ಸಾಮಾಜಿಕ ಸಮಸ್ಯೆ ಆಗಿದೆ: ಶಿಕ್ಷಣ ಪಡೆಯಲು ಹೆಚ್ಚಿನ ಅವಕಾಶಗಳು ಮತ್ತು ಬಡತನವನ್ನು ಕಡಿಮೆ ಮಾಡುವುದರ ಮೂಲಕ ಮಹಿಳೆಯರ ಆರೋಗ್ಯವೂ ವೃದ್ಧಿಸುತ್ತದೆ ವಿವಾಹದ ವಯಸ್ಸೂ ಹೆಚ್ಚಾಗುತ್ತದೆ. ಹಾಗಾಗಿ, ಬೇಗನೆ ಮದುವೆಯಾಗುವುದಕ್ಕೆ ಬಡತನ ಮತ್ತು ಶಾಲಾ ಶಿಕ್ಷಣದ ಅಲಭ್ಯತೆಯೇ ಮೂಲ ಕಾರಣ ಎನ್ನುವುದಾದರೆ, ಸರ್ಕಾರವು ಈ ಸಮಸ್ಯೆಗಳನ್ನು ಬಗೆಹರಿಸುವ ಬದಲು, ಬಡ ಹೆಣ್ಣುಮಕ್ಕಳ ಪೋಷಕರನ್ನು ಜೈಲು ಶಿಕ್ಷೆಗೊಳ ಪಡಿಸುತ್ತಿರುವುದೇಕೆ ? ಫಲವತ್ತತೆಯ ಪ್ರಮಾಣ ಮದುವೆಯ ವಯಸ್ಸಿನೊಡನೆ ಸಂಬಂಧಿಸಿರುವುದಿಲ್ಲ, ಬದಲಾಗಿ ಬಡತನ ಮತ್ತು ಶಿಕ್ಷಣದ ಕೊರತೆಯೊಡನೆ ಸಂಬಂಧಿಸಿರುತ್ತದೆ.

**ಬಡತನ ಮತ್ತು ಬಡ ಹೆಣ್ಣುಮಕ್ಕಳು:** ಇನ್ನು ಕಡುಬಡ ಕುಟುಂಬಗಳು (20%), ತಮ್ಮ ಹೆಣ್ಣು ಮಕ್ಕಳಿಗೆ ಮದುವೆಯೊಂದೇ ಆಯ್ಕೆ (54%) ಇರುತ್ತದೆ ಎನ್ನುತ್ತಾರೆ. ಆಕೆಯ ರಕ್ಷಣೆ ಗಾಗಿ ಬಾಲ್ಯ ವಿವಾಹ ಮಾಡುತ್ತಾರೆ. ಅಂದರೆ ಒಬ್ಬ ಹೆಣ್ಣು ಮಗಳ ಮದುವೆಯಾದರೆ ಪೋಷಿಸುವ ಜವಾಬ್ದಾರಿ ಯಿಂದ ಸಹ ಬಿಡುಗಡೆ ಬಡ ಕುಟುಂಬಕ್ಕೆ ಮುಖ್ಯ ವಾಗುವುದು. ಇನ್ನು ಕೋವಿದ್ ಕಾಲದಲ್ಲಿ, ಕೆಲಸವಿಲ್ಲದೆ ಸಂಕಷ್ಟ ಪಡುತ್ತಿರುವಾಗ, ಹೆಣ್ಣು ಮಕ್ಕಳ ಬಾಲ್ಯ ವಿವಾಹ ಹಾಗೂ ಮಾರಟ ಜಾಸ್ತಿ ಆಗಿದ್ದು ದಾಖಲೆ ಇದೆ.

**ಉತ್ತರ ಸ್ಪಷ್ಟ:** ಏಕೆಂದರೆ ಕನಿಷ್ಟ ವಿವಾಹ ವಯೋಮಾನವನ್ನು ಹೆಚ್ಚಿಸಿ ಬಡ ಜನತೆಯನ್ನು ಅಪರಾಧಿಗಳಂತೆ ಮಾಡುವುದು ಸರ್ಕಾರದ ಪಾಲಿಗೆ ಹೆಚ್ಚಿನ ಖರ್ಚು ಇಲ್ಲದ, ಹೆಚ್ಚಿನ ಶ್ರಮ ಇಲ್ಲದ ಕ್ರಮವಾಗುತ್ತದೆ. ನಿರುದ್ಯೋಗ ಮತ್ತು ಬಡತನದ ನಿವಾರಣೆ ಮತ್ತು ಕೈಗೆಟುಕುವ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಸೌಲಭ್ಯ ನೀಡುವುದು ಇವೆಲ್ಲವೂ ಸರ್ಕಾರದ ಭಂಡಾರಕ್ಕೆ ಹೊರೆಯಾಗುತ್ತದೆ. ಇದಕ್ಕೆ ಬದಲಾಗಿ ಸರ್ಕಾರ ಅಂಬಾನಿ ಅದಾನಿಯವರಂತಹ ಕಾರ್ಪೋರೇಟ್ ಉದ್ಯಮಿಗಳಿಗೆ ರಿಯಾಯಿತಿಗಳನ್ನು ಒದಗಿಸಲು ತೆರಿಗೆದಾರರ ಹಣವನ್ನು ಖರ್ಚು ಮಾಡಲು ಬಯಸುತ್ತದೆ.

**ಅಂತಿಮವಾಗಿ:** ಅನೇಕ ರಾಜ್ಯಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗುತ್ತಿರುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿಜಕ್ಕೂ ಕಾಳಜಿ, ಕಳಕಳಿ ಇದ್ದಲ್ಲಿ, ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಇದ್ದರೆ, ಸರ್ಕಾರದ ಆದ್ಯತೆ ಬಡತನ ನಿರ್ಮೂಲನೆ ಮತ್ತು ಪೌಷ್ಟಿಕಾಂಶವನ್ನು ಹೆಚ್ಚಿಸುವುದಾಗಬೇಕು. ಸರ್ಕಾರ ವಿವಾಹ ವಯಸ್ಸು ಹೆಚ್ಚಿಸುವ ಬದಲು ಮಕ್ಕಳನ್ನು ಶಿಕ್ಷಣದ ವಲಯದಲ್ಲೇ ಉಳಿಸಿ ಕೊಳ್ಳ ಬೇಕು, ಆರ್ಥಿಕ ಸಬಲೀಕರಣ ಮಾಡಬೇಕು, ಆರೋಗ್ಯದ ಕಡೆ ಗಮನ ಹರಿಸಬೇಕು. ಶಿಕ್ಷಣ ಖಾತರಿ ಪಡಿಸ ಬೇಕು ಬರೀ ಉಚ್ಚ ಶಿಕ್ಷಣ ಮಾತ್ರವಲ್ಲ, ಹಳ್ಳಿಕಡೆ ಬಿಸಿ ಊಟದ, ಟಾರ್ ರಸ್ತೆ, ಬಸ್ ವ್ಯವಸ್ಥೆ ಹಾಸ್ಟೆಲ್ ವ್ಯವಸ್ಥೆ ಎಲ್ಲಾ ಸಾರ್ವಜನಿಕ ವಲಯದ ಸಂಸ್ಥೆಯ ಸಬಲೀಕರಣ ಆಗಬೇಕು.

ಮಹಿಳೆಯರ ಮತ್ತು ಪುರುಷರ ಕನಿಷ್ಟ ವಿವಾಹ ವಯೋಮಾನವನ್ನು 18 ವರ್ಷಕ್ಕೆ ನಿಗದಿಪಡಿಸುವುದರಿಂದ ಮಹಿಳೆಯರ ಸ್ವಾಯತ್ತತೆ ಮತ್ತು ಆಯ್ಕೆಯ ಸ್ವಾತಂತ್ರ್ಯ ಮತ್ತು ಲಿಂಗ ಸಮಾನತೆ ಸಾಧ್ಯವಾಗುವುದು. ಪ್ರತಿಯೊಬ್ಬ ಮಹಿಳೆ ಯಾರನ್ನು ಪ್ರೀತಿಸಿ ಯಾವಾಗ ಮದುವೆಯಾಗಬೇಕು ಅಥವಾ ಮದುವೆಯೇ ಆಗಕೂಡದು ಎಂದು ನಿರ್ಧರಿಸುವ ಹಕ್ಕು ಬೇಷರತ್ತಾಗಿ ಇರಬೇಕು.

★ ಇ ರತಿ ರಾವ್

Kannada Liberation | Monthly Publication
RNI No. KARKAN/2002/07847
Posting at Bengaluru, Karnataka

# ನಮ್ಮ ಕಾರ್ಯಕ್ರಮಗಳು




ಗಂಗಾವತಿ ಪುರಸಭೆಯಲ್ಲಿ ಪೌರಕಾರ್ಮಿಕರು ನಡೆಸಿದ ಪರಿಸರ ಸಂರಕ್ಷಣಾ ಹೋರಾಟ




ಬೆಂಗಳೂರಿನಲ್ಲಿ 'ಐಟಿಐ ಕಾರ್ಪೋರೇಟ್ ಆಫೀಸ್ ಚಲೋ' ಕಾರ್ಯಕ್ರಮ



ಹಲವಾರು ಮಹಿಳಾ ಸಂಘಟನೆಗಳು ಒಗ್ಗೂಡಿ 'ಶಾಂತಿಗಾಗಿ ಮಹಿಳೆಯರು' ಎಂಬ ಹೋರಾಟವನ್ನು ಬೆಂಗಳೂರು ನಗರದಲ್ಲಿ ಹಮ್ಮಿಕೊಂಡಿದ್ದರು



ಐಟಿಐ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಿದ್ದ ನಟ ಮತ್ತು ಸಾಮಾಜಿಕ ಕಾರ್ಯಕರ್ತ ಚೇತನ್ ಅಹಿಂಸಾ



ಐಟಿಐ ಕಾರ್ಮಿಕರ ಹೋರಾಟ ಮತ್ತು ಅವರ ಕೆಲಸದ ಪರಿಸ್ಥಿತಿಯ ಕುರಿತು ಸಂಶೋಧಕರು ಮತ್ತು ಇತರರು ವರದಿಯನ್ನು ತಯಾರಿಸಿ ಅದನ್ನು ಬಿಡುಗಡೆ ಮಾಡಿದರು



ಗಣತಂತ್ರ ದಿನದಂದು ಅಂಬೇಡ್ಕರ್ ಅವರ ಭಾವಚಿತ್ರ ಇದ್ದ ಕಾರಣ ಜಿಲ್ಲಾ ನ್ಯಾಯಾಧೀಶರು ಮಂಜುನಾಥ್ ಗೌಡ ಧ್ವಜಾರೋಹಣ ಮಾಡಲು ನಿರಾಕರಿಸಿದ್ದ ವಿಚಾರವಾಗಿ 'ರಾಯಚೂರು ಬಂದ್' ಆಚರಿಸಲಾಯಿತು

EDITORIAL OFFICE: NO. 19, BHARAT BHAVAN, NO. 35, 1ST FLOOR, OPP. BALAJI PLYWOODS, INFANTRY ROAD, SHIVAJINAGAR, BANGALORE - 01.

Email: cpimlkarnataka@gmail.com
Facebook & Twitter: @CPIMLKar
Printed and Published by Clifton D' Rozario for the State Committee, CPIML (Liberation)
No. 19, Bharat Bhavan, No. 35, First Floor, Opp. Balaji Plywoods, Infantry Road, Shivajinagar, Bangalore - 560 001.

Printed at: